3. On the request of the Corporation Authorities for furnishing detailed estimates for providing water supply to Madivala, Tavarekere, Suddaguntepalya, the Bangalore Water Supply and Sewerege Board furnished estimates amounting to Rs. 8.96 lakhs. The Bangalore City Corporation however took the stand that it was the obligatory duty of the Bangalore Water Supply and Sewerage Board to lay the mains and sub-mains in the Corporation limits and that the Corporation was not required to place any funds with the Bangalore Water Supply and Sewerage Board for taking up the work.

4. Meanwhile, the Bangalore Development Authority prepared a development scheme for Suddaguntepalya village at an estimated cost of Rs. 11.70 lakhs which included water supply to this village. The Bangalore Development Authority has also prepared the Tavarekere, Madivala scheme at an estimated cost of Rs. 20 lakhs for improving the five villages of Madivala, Tavarekere, Chinna Madivala Suddaguntepalya and Gurappanapalya.

5. The schemes for providing water supply to these villages have been prepared by the Bangalore Water Supply and Sewerage Board and the Bangalore Development Authority. The execution of these schemes will be taken up at an early date after deciding the investments to be made therein by the concerned agencies namely the Bangalore City Corporation, the Bangalore Development Authority and the Bangalore Water Supply and Sewerage Board.

ಸನ್ಮಾನ್ಯ ಶ್ರೀ ಎಂ. ಚಂದ್ರಶೇಖರ್‌ರವರೇನು ಒಂದು ವಿಷಯವನ್ನು ಚರ್ಚೆಗೆ ತಂದಿದ್ದಾರೆ. ಅದು ನನ್ನ ಗಮನಕ್ಕೆ ಬಂದಿದೆ. ಅದರಲ್ಲಿ ಒಂದು ಕನ್‌ಫ್ಯೂಜ್ ಉದ್ಭವ ಆಗಿಬಿಟ್ಟಿದೆ. ಅವರು ಹೇಳಿದ ಹಾಗೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ, ಸಿಟಿ ಕಾರ್ಪೊರೇಷನ್ ಮತ್ತು ಈ ವಾಟರ್ ಸಿವರೇಜ್ ಬೋರ್ಡ್‌ನವರೆಲ್ಲ ಸ್ವಲ್ಪ ಕನ್‌ಫ್ಯೂಜ್ ಕ್ರಿಯೇಟ್ ಆಗಿರುವುದರಿಂದ ಈ ಮೂರು ಏಜೆನ್ಸಿಗಳವರನ್ನು ಮೀಟಿಂಗ್‌ಗೆ ಕರೆಸಿ ಕೂಲಂಕುಷವಾಗಿ ವಿಚಾರಮಾಡಿ, ಯಾವ ಹಿನ್ನೆಲೆಯಲ್ಲಿ ಏನಾಗಿದೆಯೆಂಬುದನ್ನು ತಿಳಿದುಕೊಂಡು ಅದನ್ನು ಆದಷ್ಟು ಬೇಗ ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Budget Estimates for 1979–80
(Demands for grants)

Demand Nos. 5,7,8 and 53

(debate continued)

ಛೇರ್ಮನ್.— ಈಗ ಬೇಡಿಕೆಗಳ ಮೇಲಿನ ಚರ್ಚೆಯನ್ನು ಶ್ರೀ ವಿ. ಬಿ. ಭಾವಿಯವರು ಪ್ರಾರಂಭಿಸಬಹುದು.

† ಶ್ರೀ ವಿ. ಬಿ. ಭಾವಿ (ಮುಂಡರಗಿ);— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕೈಗಾರಿಕಾ ಮಂತ್ರಿಗಳು ಮುಂಡಿಸಿದಂಥ ಬೇಡಿಕೆಗಳಿಗೆ ಸಂಪೂರ್ಣವಾಗಿ ಬೆಂಬಲ ಕೊಡುತ್ತಾ, ಕೈಗಾರಿಕಾ ಬೇಡಿಕೆಗಳ ಮೇಲೆ ಮಾತನಾಡುತ್ತಾ ಯಾವ ರೀತಿಯಲ್ಲಿ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ನೆಲಸಬೇಕೆಯೋ ಇಲ್ಲ ಎನ್ನುವುದಕ್ಕೆ ಕೆಲವೊಂದು ಸಲಹೆಗಳನ್ನು ಕೊಡಬಯಸುತ್ತಿದ್ದೇನೆ. ಏತಕ್ಕೆಂದರೆ ನಮ್ಮ ಕನ್ನಡ ನಾಡಿನ ಖ್ಯಾತ

ತಂತ್ರಜ್ಞರಾದ ಮತ್ತು ಮಹಾಶಿಲ್ಪಿಗಳೂ ಮತ್ತು ಕನ್ನಡ ನಾಡಿನ ಕೈಗಾರಿಕಾ ಬೆಳವಣಿಗೆಯ ಸ್ಥಾಪನೆಗೆ ಮೂಲ ಪುರುಷರಾದಂಥ ದಿ॥ ಪೋಕ್ಷಗುಂಡಂ ವಿಶ್ವೇಶ್ವರಯ್ಯನವರು ಏನೊಂದು ಆಶಾ ಸೌಧವನ್ನು ಕಟ್ಟಿಕೊಂಡಿದ್ದರೋ ಆ ಆಶಾಸೌಧ ಮಾಯವಾಗಲಿಕ್ಕೆ ಹತ್ತಿದೆ. ಅಂದರೆ ಏನೂ ಆಗುತ್ತಿಲ್ಲ. ಆದರೆ ನಾವು ಹಿಂದಿನ ಸರ್ಕಾರಗಳು ಮಾಡಿದಂಥ ಕೆಲಸವನ್ನು ಮತ್ತು ನಮ್ಮ ಸರ್ಕಾರ ಮಾಡಿದಂಥ ಕೆಲಸಗಳ ಬಗ್ಗೆ ಒಂದು ಪಕ್ಷಿನೋಟವನ್ನು ನೋಡಿದಾಗ ಹಿಂದಿನ ಸರ್ಕಾರಕ್ಕಿಂತ ನಮ್ಮ ಸರ್ಕಾರ ಸ್ವಲ್ಪ ಮಟ್ಟಿಗೆ ಪ್ರಗತಿಯನ್ನು ಸಾಧಿಸಿದೆಂದು ಹೇಳಬಹುದಾಗಿದೆ. ಇಲ್ಲಿ ಎಲ್ಲಾ ಪಟ್ಟಣಗಳಲ್ಲಿಯೇ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆಯೇ ಹೊರತು ಇವತ್ತು ನಮ್ಮ ಸರ್ಕಾರದ ಮೂಲೋದ್ದೇಶವೆನಿತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಬೆಳೆಸಬೇಕು ಅಂತ ಏನು ಉದ್ದೇಶವನ್ನಿಟ್ಟುಕೊಂಡಿದ್ದೆವೆಯೋ ಅದರಲ್ಲಿ ನಮ್ಮ ಸರ್ಕಾರ ಸಫಲವಾಗಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಸರ್ಕಾರದವರು ಕೆಲವೊಂದು ಡಿಸ್ಟ್ರಿಕ್ಟ್ ವೈಜ್ ಇಂಡಸ್ಟ್ರೀಡ್ ಡೆವಲಪ್‌ಮೆಂಟ್ ಸರ್ವೆ ಮಾಡಿಸಿದ್ದಾರೆ. ಆದರೂ ಸಹ ನಮ್ಮ ಮಾನ್ಯ ಮಂತ್ರಿಗಳವರು ನಮ್ಮ ಉತ್ತರ ಕರ್ನಾಟಕದ ಬಗ್ಗೆ ಅಷ್ಟೊಂದು ಲಕ್ಷ್ಯವನ್ನು ವಹಿಸಿಲ್ಲ ಅಂತ ನಾನು ಸ್ಪಷ್ಟವಾಗಿ ಹೇಳಬಯಸುತ್ತಿದ್ದೇನೆ. ಏತಕ್ಕೆಂದರೆ ಕೆಲವೊಂದು ಉದಾಹರಣೆಗಳನ್ನು ಕೊಡುವುದಾದರೆ ನಮ್ಮ ರಾಯಚೂರು, ಗದಗ್, ಹುಬ್ಬಳ್ಳಿ ಧಾರವಾಡ, ಬಾಗಲಕೋಟೆ ಇಲ್ಲೆಲ್ಲಾ ನಾವು ಹೆಚ್ಚಾಗಿ ಹತ್ತಿ ಬೆಳೆಯತಕ್ಕ ಪ್ರದೇಶವಾಗಿದೆ ಅಲ್ಲಿ ನಮ್ಮ ಸರ್ಕಾರದ ವತಿಯಿಂದ ಯಾವ ಸ್ಪಿನ್ನಿಂಗ್ ಮಿಲ್‌ಗಳು ಇಲ್ಲ, ಎಲ್ಲಾ ಹೆಚ್ಚು ಕಡಿಮೆ ಪ್ರೈವೇಟ್ ಸ್ಪಿನ್ನಿಂಗ್ ಮಿಲ್‌ಗಳು ಇವೆ. ನಮ್ಮ ಎಕ್ಸ್‌ಪರ್ಟ್ ಕಮಿಟಿಯವರ ವರದಿ ಪ್ರಕಾರ ಕನಿಷ್ಟ ಪಕ್ಷ ೨೫ ಸಾವಿರ Spindles ಇರಬೇಕೆಂದು ಹೇಳಿದ್ದಾರೆ, ಆದುದರಿಂದ ಮಾನ್ಯ ಕೈಗಾರಿಕಾ ಮಂತ್ರಿಗಳವರು ಈ ೨೫ ಸಾವಿರ Spindles ಗಳನ್ನು ಒದಗಿಸಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹೆಚ್ಚಾಗಿ ನಮ್ಮ ಉತ್ತರ ಕರ್ನಾಟಕದಲ್ಲಿ ಮೇಜರ್ ಇಂಡಸ್ಟ್ರೀಗಳು ಸ್ಥಾಪನೆಯಾಗುತ್ತಿಲ್ಲ. ಅದಕ್ಕಾಗಿ ಮಾನ್ಯ ಕೈಗಾರಿಕಾ ಮಂತ್ರಿಗಳು ಎಲ್ಲ ಜಿಲ್ಲೆಗಳಿಗೂ ಒಂದು ಸಮವಾದ ಪ್ರಾತಿನಿಧ್ಯ ಕೊಟ್ಟು ಸರ್ಕಾರದ ವತಿಯಿಂದ ಮೇಜರ್ ಇಂಡಸ್ಟ್ರೀಗಳನ್ನು ಸ್ಥಾಪಿಸಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ. ಸರ್ಕಾರದ ವತಿಯಿಂದ ತಾವೇ ಮೇಜರ್ ಇಂಡಸ್ಟ್ರೀಗಳನ್ನು ಸ್ಥಾಪಿಸಬೇಕೆಂಬುದಕ್ಕೆ ಒಂದು ಉದ್ದೇಶ ಇದೆ. ಏಕೆಂದರೆ ಖಾಸಗಿಯವರು ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕೆ ಮುಂದೆ ಬಂದಾಗ ಸರ್ಕಾರದವರು ಎಷ್ಟೇ ಸಹಾಯ ಮಾಡಿದರೂ ಸಹ ಸರ್ಕಾರದ ಸಲಹೆಗಳನ್ನು ಖಾಸಗಿಯವರು ಒಪ್ಪುವುದಕ್ಕೆ ತಯಾರಿರುವುದಿಲ್ಲ. ಕಾರಣವೇನೆಂದರೆ, I have got a standing example ; the private industry owners are not obeying even the suggestions given by the government. In Bangalore, there is this Graphite India Limited manufacturing electrodes. They have been allocated several millions of units of power by the Electricity Board. There are nine mini steel plants in the State and all these depend on this company. In recent months, they have completely stopped the supplies to the Karnataka steel plants and have been diverting their entire production outside the State. The units in Karnataka have consequently suffered. Several representations were made to the Industries Minister but no effective measures are taken. They are allowed to export outside the State without meeting the demands of the units within the State. I would like to know whether the Government or Minister has taken any action on the representations made to the Minister. I want clarification on this point in respect of Graphite India Ltd.

ಈ ತರಹ ಇವರು ಮಾಡುತ್ತಾ ಹೋದರೆ ಸರ್ಕಾರದ ಸಲಹೆಗಳಿಗೂ, ಸರ್ಕಾರ ಕೊಡತಕ್ಕ ಸೂಚನೆಗಳಿಗೂ ಅವರು ಬಗ್ಗದಿದ್ದರೆ, ಸರ್ಕಾರದ ನಿಯಂತ್ರಣ ಇಂಥ ಇಂಡಸ್ಟ್ರಿಗಳ ಮೇಲೆ ಇಲ್ಲದಿದ್ದರೆ ಸರ್ಕಾರ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಸಾವಿರಾರು ಕೆಲಸಗಾರರಿಗೆ ಕೆಲಸ ಕೊಡಿಸುವುದು, ನಿರುದ್ಯೋಗ

ನಿವಾರಣೆ ಮಾಡುವುದು ಸಾಧ್ಯವಾಗದ ಕೆಲಸವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳನ್ನು ಕೇಳಿ ಕೊಳ್ಳುವುದು ಏನೆಂದರೆ, ಸರ್ಕಾರವೇ ಮುಂದೆ ಬಂದು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಎಂದು. ಇನ್ನು ಕೈಗಾರಿಕಾ ಇಲಾಖೆ ಯಾವ ರೀತಿ ನಡೆಯುತ್ತಿದೆ ಅನ್ನುವುದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಯಸುತ್ತೇನೆ. ಕೈಗಾರಿಕಾ ಇಲಾಖೆಯಲ್ಲಿ ಒಬ್ಬರು ಅಧಿಕಾರಿಗಳಿದ್ದಾರೆ ; ಅವರು ಕೈಗಾರಿಕಾ ಶೆಲ್ಲಿನ ಮುಖ್ಯಸ್ಥರು. ಯಾರಾದರೂ ನಿವೃತ್ತ್ಯೋಗಿ ಪದವೀಧರರು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಅವರ ಪತ್ತಿರ ಹೋದರೆ, ಅದನ್ನು ಬಿಟ್ಟು ಬೇರೆಯದನ್ನು ಸ್ಥಾಪಿಸಿ ಎಂದು ಸಲಹೆ ಮಾಡುತ್ತಾರೆ. ಒಬ್ಬ ಬಿ.ಇ. ಪದವೀಧರ ನನಗೆ: ಇಂಥದರಲ್ಲಿ ಚೆನ್ನಾಗಿ ಜ್ಞಾನ ಇದೆ; ಆದ್ದರಿಂದ ನಾನು ಇಂಥ ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇನೆಂದರೆ ಅದಕ್ಕೆ ಅವರು; ಒಪ್ಪದೆ ಅದನ್ನು ಬಿಟ್ಟು ಬೇರೆಯದನ್ನು ಮಾಡಿ ಎಂದು ಹೇಳುತ್ತಾರೆ. ಈ ರೀತಿಯಾಗಿ ಸಲಹೆ ಕೊಟ್ಟಾಗ ಇದರ ಪರಿಣಾಮ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಬಂದ ಮನುಷ್ಯನ ಮೇಲೆ ಯಾವ ರೀತಿ ದುಷ್ಪರಿಣಾಮ ವನ್ನು ಉಂಟುಮಾಡುತ್ತದೆಂಬುದನ್ನು ಸರ್ಕಾರ ಗಮನಿಸಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇದರಿಂದ ಏನಾಗುತ್ತದೆಂದರೆ ಕೈಗಾರಿಕೆಯನ್ನು ಸ್ಥಾಪಿಸಬೇಕೆಂದು ಬಂದವನನ್ನು ಡಿಸ್‌ಕರೇಜ್ ಮಾಡಿದಂತಾಗುತ್ತದೆ. ಈ ರೀತಿ ಈ ಕೈಗಾರಿಕಾ ಇಲಾಖೆಯಲ್ಲಿ ನಡೆಯುತ್ತಿದೆ. ಆದ್ದರಿಂದ ಇದನ್ನು ಮಾನ್ಯ ಮಂತ್ರಿಗಳು ತಮ್ಮ ಗಮನಕ್ಕೆ ತೆಗೆದುಕೊಂಡು ಯಾವ ವ್ಯಕ್ತಿ ಒಂದು ಕೈಗಾರಿಕೆಯನ್ನು ಸ್ಥಾಪಿಸಬೇಕೆಂದು ಮುಂದೆ ಬರುತ್ತಾನೋ ಅದಕ್ಕೆ ಪ್ರೋತ್ಸಾಹ ಕೊಡಬೇಕೆಂದೂ ಮತ್ತು ಆ ಬಗ್ಗೆ ತಮಗೆ ತಿಳಿದಿದ್ದನ್ನು ಹೇಳಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಇನ್ನು ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ ಇದುವರೆಗೆ ಬಾಂಬೆ ಕರ್ನಾಟಕ ವಿರಿಯಾ ದಲ್ಲಿ ಎಷ್ಟು ಜನರಿಗೆ ಸ್ಥಾನ ಕೊಟ್ಟಿರುತ್ತದೆ ಮತ್ತು ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕೆ ಯಾವ ರೀತಿ ಒಂದು ಪ್ರೋತ್ಸಾಹ ಕೊಟ್ಟಿದೆ ಏಬುದನ್ನು ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ ಏಕೆಂದರೆ ಉತ್ತರ ಕರ್ನಾಟಕವನ್ನು ಕಂಪ್ಲೀಟ್ ಆಗಿ ನೆಗ್ಲೆಕ್ಟ್ ಮಾಡಿದ್ದಾರೆ; ಅಲ್ಲಿ ಮೇಜರ್ ಇಂಡಸ್ಟ್ರಿಗಳಾ ಗಲೀ, ಮೈನರ್ ಇಂಡಸ್ಟ್ರಿಗಳಾಗಲಿ ಇಲ್ಲ. ಸರ್ಕಾರದವರು ಮುಂದೆ ಬಂದು ಇಂಥ ಇಂಡಸ್ಟ್ರಿಗಳನ್ನು ಹಾಕ ಬೇಕೆಂಬ ಯೋಜನೆಯನ್ನು ಕೂಡ ಮಾಡುತ್ತಿಲ್ಲ. ಅದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಕಳೆದ ೩ ವರ್ಷಗಳ ಹಿಂದೆ ಶ್ರೀ ಎಸ್. ಎಂ. ಕೃಷ್ಣ ಅವರು ಕೈಗಾರಿಕಾ ಮಂತ್ರಿಗಳಾಗಿದ್ದಾಗ ಮೋಟಾರ್ ಸೈಕಲ್‌ಗಳನ್ನು ತಯಾರಿಸತಕ್ಕ ಇಂಡಸ್ಟ್ರಿಯನ್ನು ಹುಬ್ಬಳ್ಳಿ–ಧಾರವಾಡದಲ್ಲಿ ಹಾಕಬೇಕೆಂಬ ಯೋಜನೆ ಯನ್ನು ಇಟ್ಟುಕೊಂಡಿದ್ದೇವೆ; ಮತ್ತು ಅದನ್ನು ಈ ವರ್ಷದಲ್ಲೇ ಸ್ಥಾಪನೆ ಮಾಡುತ್ತೇವೆಂದು ಅಶೋಕ ಹೋಟಲಿನಲ್ಲಿ ಪ್ರೆಸ್ ಕಾನ್‌ಫರೆನ್ಸ್ ಕರೆದು ಹೇಳಿಕೆಕೊಟ್ಟಿದ್ದರು. ಆದರೆ ಈವರಾಗಾಯ್ತು ಸ್ಥಾಪನೆ ಯಾಗಲಿಲ್ಲ. ತಾವು ಕೂಡ ಇವತ್ತಿನವರೆಗೆ ಆ ಯೋಜನೆಯನ್ನು ಕೈಗೆ ತೆಗೆದುಕೊಂಡಿಲ್ಲ. ಆ ಕೈಗಾರಿಕೆ ಯನ್ನು ಮೈಸೂರಿನಲ್ಲಿ ಸ್ಥಾಪಿಸತಕ್ಕ ಸುದ್ದಿ ಕೇಳಿಬಂದಿದೆ. ಆದ್ದರಿಂದ ಮಾನ್ಯ ಕೈಗಾರಿಕಾ ಮಂತ್ರಿ ಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಏನು ಒಂದು ಕಮಿಟ್‌ಮೆಂಟ್ ಮಾಡಿಕೊಂಡಿದ್ದೀರಿ ಅದನ್ನು ದಯವಿಟ್ಟು ಕೈಬಿಡಬಾರದು ಎಂದು ಆ ಒಂದು ಕೈಗಾರಿಕೆಯನ್ನು ಹುಬ್ಬಳ್ಳಿ–ಧಾರವಾಡದಲ್ಲೇ ಸ್ಥಾಪಿಸುತ್ತೇವೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರದವರು ಆಪ್ಪೊಂದು ಶೀಘ್ರಗತಿಯಲ್ಲಿ ಯೋಜನೆಗಳನ್ನು ಹಾಕಿಕೊಂಡಿಲ್ಲ ಎಂಬುದಕ್ಕೆ ಎಸ್ಟಿಮೇಟ್ ಕಮಿಟಿಯ ವರದಿಯನ್ನು ನೋಡಿದರೆ ಸ್ಪಷ್ಟವಾಗುತ್ತದೆ. I will read only the relevant portion, 'However, one point which the Committee observe is that only 10 per cent of the total assistance has gone to backward districts. It is important that institutions like the State Financial Corporation keep in view the need to be guided by the overall socio-economic objectives in its financial policies."

ಎಸ್ಟಿಮೇಟ್ ಕಮಿಟಿಯ ವರದಿಯಲ್ಲಿ ನೋಡಿದಾಗ ಉತ್ತರ ಕರ್ನಾಟಕದ ಪೈಕಿ ಧಾರವಾಡ ಜಿಲ್ಲೆ ಹಿಂದುಳಿದ ಜಿಲ್ಲೆ ಎಂದು ಸರ್ಕಾರದವರು ಡಿಕ್ಲೇರ್ ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಈ ಜಿಲ್ಲೆಗೆ ಕೇವಲ ಶೇಕಡ ೧೦ರಷ್ಟು ಧನ ಸಹಾಯ ದೊರೆತಿದೆ ಎಂಬುದನ್ನು ಸಹ ವರದಿಯಲ್ಲಿ ಕೊಟ್ಟಿದ್ದಾರೆ. ನನಗೆ ತಿಳಿದ ಪ್ರಕಾರ ನ್ಯಾಯವಾದುದನ್ನು ಹೇಳಬೇಕಾದರೆ, ಸರ್ಕಾರದವರು ಗ್ರಾಮಾಂತರ ಪ್ರದೇಶ

ಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕಾದರೆ ಕೊನೇಪಕ್ಷ ಶೇಕಡ ೫೦ರಷ್ಟು ಆದರೂ ಧನಸಹಾಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಎಸ್ಟಿಮೇಟ್ ಕಮಿಟಿಯು ವರದಿಯಲ್ಲಿ ಕೂಡ ಹೇಳಿದ್ದಾರೆ. "Efforts should be made to improve the condition of industrially backward areas of the State by appropriate measures of assistance. The Industrial Estates should be nursery beds for promoting new, modern and sophisticated units. The Committee urge that the State should make rapid strides in industry and secure a better place in the industrial map of the country."

ಈ ರೀತಿಯಾಗಿ ೧೯೭೬ರಲ್ಲಿ ವರದಿ ಮಾಡಿದ ಮೇಲೆ, ಆಲ್ಲಿಂದ ಇಲ್ಲಿಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರದವರು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಯಾವ ರೀತಿ ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೈಗಾರಿಕಾ ಇಲಾಖೆಯಲ್ಲಿ ಕೆಲವೊಂದು ಅಧಿಕಾರಿಗಳು ಏನು ತಿಳಿದುಕೊಂಡಿದ್ದಾರೆಂದರೆ, 'ಕಮಿಷನ್ ಮತ್ತು ಲೈಸೆನ್ಸ್' ಇವೆರಡನ್ನು ಕೊಟ್ಟರೆ ನಮ್ಮ ಕೆಲಸ ಮುಗಿಯಿತು ಎಂದು. ಅದು ಖಂಡಿತ ತಪ್ಪು ಎಂದು ಹೇಳುತ್ತೇನೆ. ಯಾರು ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುತ್ತಾರೋ ಅವರಿಗೆ ಸರಿಯಾದ ರೀತಿಯಲ್ಲಿ ಕೈಗಾರಿಕಾ ನೀತಿಯ ಬಗ್ಗೆ ಗೈಡೆನ್ಸ್ ನೀಡಬೇಕು. ಏಕೆಂದರೆ, ಗೈಡೆನ್ಸ್ ಕೊಡುವುದು ಇರಲಿ, ಐ ಎ. ಎಸ್. ಅಧಿಕಾರಿಗಳು ಕೈಗಾರಿಕೆಗಳನ್ನು ಸ್ಥಾಪಿಸುವವರೊಡನೆ ಸರಿಯಾಗಿ ಮಾತು ಕೂಡ ಆಡುವುದಿಲ್ಲ. ಆದ್ದರಿಂದ ಗೈಡ್ ಮಾಡುವುದು ಅವರಿಂದ ಸಾಧ್ಯವಿಲ್ಲವಾಗಿದೆ.

The Hon. Minister Sri Azeez Sait has got a very controlling power but inspite of that, I don't know why the people in the Industries Department are behaving in this manner. If he is not in a position to control them, then nobody can help. I therefore request the Hon. Minister to keep control over the Officers of the Industrial Department.

3-30 P.M.

SRI B. B. SAYANAK.—The Minister for Industries is very crisp. In Balgaum he said "You can quit Belgaum and go to Maharash ra."

SRI AZEEZ SAIT.—My hon. Friend has raised this point. It might lead to misunderstanding or compliments also. To this Indian Aluminium Factory, Belgaum, we have given sufficient power at a very very nominal rate of 0-05 and 0-07 paise. The raw material is being shifted to Maharashtra. The Industries in Karnataka suffers for want of raw materials from the Aluminium Industry. Then, I had to make it a point. I said: "You behave properly or otherwise, you quit Karnataka" and this is my firm statement even to-day. Whether it is Indian Aluminium Factory or Graphite India; They are enjoying the amenities at the cheaper costs and not providing the raw materials required for the Industries in Karnataka. I don't want such industries to exist in Karnataka. It is better to quit this place. I still say it and I still firm on that point.

Sri B. B. SAYANAK.—The raw material is coming from Maharashtra to Karnataka but the Hon. Minister Sri Azeez Sait has said "You quit Karnataka and go to Maharashtra." This is not the answer expected from the Hon. Minister.

Sri AZEEZ SAIT.—Even now I say the samething.

SRI B. B. SAYANAK.—The Aluminium Factory people are getting the raw material from Maharashtra.

MR. CHAIRMAN.—The hon. Member should adopt certain normal conventions. Before standing up and speaking, the hon. Member should take the permission of the Chair. To make the debate lively, I can appreciate if some remarks are passed, in the middle. But standing up and making very serious allegations which may give rise to lot of heat is not correct, When the hon. Member gets a chance to speak he can raise that issue.

SRI B. B. SAYANAK.—I was under the impression that I lost my chance, Therefore, when he raised that issue, I have said something on that.

ಶ್ರೀ ವಿ. ಬಿ. ಭಾವಿ.-ಅದಕ್ಕಾಗಿ ನಾನು ಮಾನ್ಯ ಕೈಗಾರಿಕಾ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಈ ಸ್ಮಾಲ್‌ಸ್ಕೇಲ್ ಆಗಲೀ, ಮೇಜರ್ ಇಂಡಸ್ಟ್ರೀಸ್ ಆಗಲೀ ಈ ಕೈಗಾರಿಕೆಗಳನ್ನು ನಾವು ಸ್ಥಾಪನೆ ಮಾಡುತ್ತೇವೆ ಎಂದು ಸಲಹೆ ಕೇಳುವುದಕ್ಕೆ ಬರತಕ್ಕಂಥ ಜನರಿಗೆ ತಮ್ಮ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರು ಪ್ರಾಪರ್ ಗೈಡೆನ್ಸ್ ಕೊಡುವುದಕ್ಕಾಗಿ ತಾವು ಅವರಿಗೆ ಡೈರೆಕ್ಷನ್ ಕೊಡಬೇಕು ಎಂದು ನಾನು ಮಾನ್ಯ ಕೈಗಾರಿಕಾ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. After all, even the Deputy Commissioner issues a licence ಆದರೆ ನಿಯಮಗಳ ಪ್ರಕಾರ ಯಾವರೀತಿ ಕೈಗಾರಿಕೆಗಳನ್ನು ಬೆಳೆಸಬೇಕು ಎನ್ನತಕ್ಕಂಥ ಬಗ್ಗೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರು ಅವರಿಗೆ ಸಲಹೆ ಕೊಟ್ಟು ಕಳಿಸಬೇಕೇ ವಿನಃ ಬರೀ ಪರ್‌ಮಿಷನ್ ಮತ್ತು ಲೈಸೆನ್ಸ್ ಕೊಟ್ಟರೆ ಅದರಿಂದ ಕೈಗಾರಿಕೆಗಳ ಅಭಿವೃದ್ಧಿಯಾಗುವುದಿಲ್ಲ ವೆಂದು ಹೇಳುತ್ತಿದ್ದೇನೆ. ಇನ್ನೊಂದು ವಿಚಾರವೇನೆಂದರೆ ಈ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಸ್ಥಾಪನೆ ಮಾಡಬೇಕೆಂಬ ಉದ್ದೇಶ ಇಟ್ಟು ಕೊಂಡು, ತಮ್ಮ ಸ್ಟ್ಯಾಂಡರ್ಡ್‌ಗೆ ತಕ್ಕ ಹಾಗೆ ಪ್ರೊತ್ಸಾಹನವನ್ನು ಇಟ್ಟು ಕೊಂಡು, ಸರ್ಕಾರದವರು ಸಾಲ ರೂಪದಲ್ಲಿ ಕೊಡತಕ್ಕಂಥ ಧನಸಹಾಯವನ್ನು ತೆಗೆದುಕೊಂಡು ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅನೇಕ ಜನರು ಮುಂದೆ ಬರುತ್ತಾರೆ. ಅವರಿಗೆ ಸಾಕಷ್ಟು ಪ್ರೋತ್ಸಾಹ ದೊರೆಯುತ್ತಾ ಇಲ್ಲ. ಅವರು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರು ಸಲಹೆ ತೆಗೆದು ಕೊಳ್ಳುವುದರಲ್ಲೇ ಇರತಕ್ಕಂಥ ಹಣವನ್ನೆಲ್ಲಾ ವಿಚ್ರ್ಯುಮಾಡಿಕೊಳ್ಳುತ್ತಾರೆ. ಮುಂದೆ ಅವರಿಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅವರು ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಬಂದಾಗ ಅವರಿಗೆ ಸೂಕ್ತ ಸಲಹೆಗಳನ್ನು ಕೊಟ್ಟು ಅವರನ್ನು ಅಲ್ಲಿಂದ ಬೇಗನೆ ಕಳಿಸುವಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಹೇಳುತ್ತಿದ್ದೇನೆ. ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳಿಗೆ ಕೇವ್ಲೊಂದು ಬಿಡಿಭಾಗಗಳನ್ನು ತಯಾರು ಮಾಡತಕ್ಕಂಥ ಕಾರ್ಖಾನೆಗಳನ್ನು ತಾವು ತಯಾರುಮಾಡಿದ್ದೀರಿ. ಒಂದು ಉದಾಹರಣೆ ಹೇಳಬೇಕು ಎಂದರೆ ನಮ್ಮ ಕೆ.ಎಸ್.ಆರ್.ಟಿಸಿ ವಿಭಾಗದಲ್ಲಿ ಈ ಬಿಡಿ ಭಾಗಗಳನ್ನು ತಯಾರು ಮಾಡತಕ್ಕಂಥ ಅನ್ಸಿಲರಿ ಇನ್‌ಸ್ಟಿಟ್ಯೂಷನ್ ತಾವುಮಾಡಿದ್ದೀರಿ. ಆವರು ತಯಾರು ಮಾಡತಕ್ಕಂಥ ಪ್ರಾಡಕ್‌ನ ಕ್ವಾಲಿಟಿ ಚೆನ್ನಾಗಿ ಇಲ್ಲ. ಇದರಿಂದಾಗಿ ನಮ್ಮ ಕೆ.ಎಸ್.ಆರ್.ಟಿ.ಸಿ ಯವರಾಗಲೀ ಮತ್ತು ಸರ್ಕಾರದವರಾಗಲೀ ಈ ಬಿಡಿಭಾಗಗಳನ್ನು ಅವರಿಂದ ಕೊಳ್ಳುವುದಕ್ಕೆ ತಯಾರು ಇಲ್ಲ. ಆದ್ದರಿಂದ ಈ ಬಿಡಿಭಾಗಗಳ ಕ್ವಾಲಿಟಿಯನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಕೈಗಾರಿಕಾ ಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಏತಕ್ಕೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಾ ಇಲ್ಲ, ಪಟ್ಟಣಗಳಲ್ಲಿ ಏತಕ್ಕೆ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ ಎನ್ನತಕ್ಕಂಥ ಪ್ರಶ್ನೆಗಳನ್ನು ಮಾನ್ಯ ಕೈಗಾರಿಕಾ ಮಂತ್ರಿಯವರಿಗೆ

ಕೇಳುವುದಕ್ಕೆ ಬಯಸುತ್ತೇನೆ. ಉದಾಹರಣೆಗೆ ಹೇಳಬೇಕು ಎಂದರೆ ಬೆಂಗಳೂರು, ಮೈಸೂರು ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಎಲ್ಲಾ ವಿಧದ ಕೈಗಾರಿಕೆಗಳ ಸ್ಥಾಪನೆಯಾಗಿವೆ ಇಲ್ಲಿ ಅದರ ಸ್ಥಾಪನೆಯಿಂದಾಗಿ ಹಿಂದೆ ಎಲ್ಲವೂ ಇಲ್ಲದಂಥ ಒಂದು ಟೆಂಪರೇಚರ್, ಡಿಗ್ರಿ ಈಗ ಬಂದಿದೆ. Because of the excess of industries in Bangalore. Now Bangalore City is completely surrounded by industries. ಇಲ್ಲಿ ಹಿಂದೆ ಇದ್ದಂಥ ಟೆಂಪರೇಚರ್ ಹಾಗೂ ಡಿಗ್ರಿಗಿಂತ ಈಗ ಒಂದಕ್ಕೆ ಎರಡರಷ್ಟು ಟೆಂಪರೇಚರ್, ಡಿಗ್ರೀ ಹೆಚ್ಚಾಗಿದೆ. ಆದ್ದರಿಂದ ಪಟ್ಟಣದಲ್ಲಿ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದನ್ನು ಬಿಟ್ಟು ಗ್ರಾಮಾಂತರ ಪ್ರದೇಶದಲ್ಲಿ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ಮಾನ್ಯ ಕೈಗಾರಿಕಾ ಮಂತ್ರಿಗಳನ್ನು ಕೇಳುತ್ತೇನೆ. ನಮ್ಮ ಬೆಂಗಳೂರಿನಲ್ಲಿ ಒಂದು ಟೆಲಿಫೋನ್ ಇಂಡಸ್ಟ್ರೀಸ್‌ನ್ನು ಹಾಕಿದ್ದಾರೆ. ಇದೇ ತರಹ ಉತ್ತರ ಕರ್ನಾಟಕದಲ್ಲಿ ನಿರುದ್ಯೋಗ ನಿವಾರಣೆ ಮಾಡುವುದಕ್ಕಾಗಿ ಹುಬ್ಬಳ್ಳಿ ಧಾರವಾಡಗಳಲ್ಲಿ ಒಂದು ಟೆಲಿಫೋನ್ ಇಂಡಸ್ಟ್ರೀಸನ್ನು ಹಾಕಬೇಕೆಂದು ನಾನು ಮಾನ್ಯ ಕೈಗಾರಿಕಾ ಮಂತ್ರಿಯವರಿಗೆ ಸಲಹೆ ಕೊಡುತ್ತಿದ್ದೇನೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಇದನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿ ಅವರಿಂದ ಸಹಾಯವನ್ನು ತೆಗೆದುಕೊಂಡು ಆಲ್ಲಿ ಟೆಲಿಫೋನ್ ಇಂಡಸ್ಟ್ರೀಸನ್ನು ಹಾಕಿಬೇಕು ಎಂದು ಹೇಳುತ್ತೇನೆ. ನಮ್ಮ ಧಾರವಾಡ ಜಿಲ್ಲೆಯಲ್ಲಿ ಅನೇಕ ಫ್ಲೈವುಡ್ ಫ್ಯಾಕ್ಟರಿಗಳು ಇವೆ. They are owned by private persons. ಅವುಗಳ ಅಭಿವೃದ್ಧಿಗಾಗಿ ಮಾನ್ಯ ಮಂತ್ರಿಯವರು ರೈಟಿಂಗ್‌ನಲ್ಲಿ ಅನೇಕ ಸಲಹೆಗಳನ್ನು ಕೊಟ್ಟರೂ ಆ ಪ್ರೈವೇಟ್ ಇನ್ಸ್‌ಟಿಟೂಷನ್‌ನವರು ಅದಕ್ಕೆ ಮಾನ್ಯತೆ ಕೊಡುತ್ತಾ ಇಲ್ಲ. ಅದಕ್ಕಾಗಿ ಇನ್ನು ಮುಂದೆ ಫ್ಲೈವುಡ್ ಫ್ಯಾಕ್ಟರಿಯನ್ನು ಮಾಡಬೇಕಾದರೆ, ನಮ್ಮಲ್ಲಿ ಸಾಕಷ್ಟು ಮ್ಯಾನ್ ಪವರ್ ಇದೆ, ಸಾಕಷ್ಟು ರಿಸೋರ್ಸಸ್ ಇದೆ. ಇದನ್ನೆಲ್ಲಾ ಉಪಯೋಗಿಸಿಕೊಂಡು ನಮ್ಮ ಹುಬ್ಬಳ್ಳಿ ಧಾರವಾಡ ಪರಿಯಾದಲ್ಲಿ ಒಂದು ಫ್ಲೈವುಡ್ ಫ್ಯಾಕ್ಟರಿಯನ್ನು ಹಾಕಿದರೆ ಅದು ಉತ್ತಮವಾಗಿ ನಡೆಯುತ್ತದೆ ಹಾಗೂ ಆಲ್ಲಿ ಇರ ತಕ್ಕಂಥ ನಿರುದ್ಯೋಗ ಸಮಸ್ಯೆಯೂ ಪರಿಹಾರವಾದಂತಾಗುತ್ತದೆ. ಆದ್ದರಿಂದ ಮಾನ್ಯ ಕೈಗಾರಿಕಾ ಮಂತ್ರಿಯವರು ನಾನು ಹೇಳಿದಂಥ ಸಲಹೆಗಳನ್ನೆಲ್ಲಾ ಪರಿಶೀಲಿಸಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರವೇನೆಂದರೆ ತಮ್ಮ ಇಂಡಸ್ಟ್ರೀಸ್ ಇಲಾಖೆಗೆ ಸೂಟು ಬೂಟು ಹಾಕಿಕೊಂಡು ಬಾಯಲ್ಲಿ ಪೈಪ್ ಇಟ್ಟುಕೊಂಡು ಸಲಹೆಗಾಗಿ, ಪರ್ಮಿಷನ್‌ಗಾಗಿ, ಮತ್ತು ಲೈಸೆನ್ಸ್‌ಗಾಗಿ ಹೋಗತಕ್ಕಂಥ ಜನರಿಗೆ ತಕ್ಷಣ ಪರ್ಮಿಷನ್, ಲೈಸೆನ್ಸ್ ಮತ್ತು ಸೂಕ್ತ ಸಲಹೆಗಳು ಸಿಕ್ಕುತ್ತವೆ ಎಂದು ಜನರು ಹೇಳುವಂಥ ಮಾತನ್ನು ನಾನು ಕೇಳುತ್ತಿದ್ದೇನೆ. ಈ ವಿಚಾರದಲ್ಲಿ. I would like to say that the doors of the Industries Department always should be open d to the poor people and also to the unemployed Engineering Graduates who come forward to start industries. They should help them to establish industries. ನಮ್ಮ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಿಂದ ಅವರಿಗೆ ಯಾವರೀತಿಯಲ್ಲಿ ಸೂಕ್ತ ಸಲಹೆಗಳು ಹಾಗೂ ಸಹಾಯಗಳು ಸಿಕ್ಕುತ್ತದೆ ಎಂಬ ಬಗ್ಗೆ ಎಸ್ಟಿಮೇಟ್ ಕಮಿಟಿಯ ವರದಿ ಪುಸ್ತಕದಲ್ಲಿ ಸ್ಪಷ್ಟವಾಗಿ ಹೀಗೆ ಪುಟವಲ್ಲಿ ಹೇಳಿದ್ದಾರೆ. In the Eigth Report on "Small Scale Industries" presented to the House by the Committee on Estimates, it has been stated as follows :-

> "The Committee, after meeting a number ot industrialists at Bangalore, Hubli, Belgaum and Bijapur feel that sufficient a tention has not been given to the implementation aspect of the policies of the Government. The good intentions of Government have not been translated into action. The Committee emphasise that the Small Scale Industrialists should receive better deal with the Department. Their problems should be solved with sympathy and understanding so that do not languish out of sheer dispair. Whatever concessions Government tells it is giving them should reach them promptly."

Now, it is not reaching to those people who are forthcoming to establish the industries. I request that the Government should see that those concessions re ch those persons promptly. I hope the Hon. Minister would take action in this regard. With these words, I thank the Chair and conclude my speech

† SRI S. H. S. BAKSHI (Bijapur).— Mr, Speaker, Sir, I want to place some suggestions regardi g Demand No. 53 *i e.* Wakfs and I hope the Hon. Minister will consider these suggestions and bring it into action.

Sir, after the Land reforms Act came into force, the tenants are becoming the owners of the lands. Thus, the Revenne authorities are paying compensation directly to Mutwallis. I would like to know what action the S ate Wakf Board has taken to rectify this ?

Secondly, in view of the Land Reforms Act the Revenue Department is entering the names of Mutwallis as real owners in respect of lands which are in their actual possession. If this is allowed then Durgha will have no properties and the Wakf Board will have no income. Therefore, I request the Government to take immediate steps to see that the l nds are entered the name of Wakf Board instead of these Mutwallis.

Thirdly, I want to remind the Hon. Minister that nearly four lakhs of rupees are to be paid to the Wakf Board in respect of Chingi shah Durgha, Takya (Bijapur). The Civil Court has ordered that amount be paid to the Wakf Board. The Acquisition Officer has also made reference to the Government Here I should say the Wakf Board is losing such a large income for having not taken action. Therefore, I request the Hon. Mini ter to see that proper steps is being taken to recover that amount and place them at the disposal of the Wakf Board.

Fourthly, there is a Circular that resurvey of Wakf properties should be done by the District Wakf Committees. This work cannot be done without the co-operation of Revenue authorities. So, instruction should be issued to the Revenue authorities to co-operate in resurvey work of Wakf pro erties.

Fifthly, there is a Circular that Wakf properties should rest with the Governmett and private persons should hand-over the properties to the Wakf Board. This matter is pending sing a long time with the Deputy Commissioners of the concerned district. If proper steps are taken in this behalf the Wakf Board will be benifitted much and it could take welfare measures for the benifits of the poor people. I request the Hon. Minister to expedite the matter and see that the provisions contained in the said circular is adhered to strictly.

Sir, in my last speech I have made several suggestions regarding thirty-nine monuments which have been deprotected long back. But up till now they have not been able to take any decision. I do not know why there is so much delay in handing over possession to Waklf Board. Therefore, I request the Government to expeditie the matter and develop Tajbawadi for tourist residence' shops etc., The rent for use by t e K.S.R.T.C should be recovered from them. The Wakf Board may be asked to recover the rent directly from K S.R.T.C. I have given details about the amounts due to the Hon. Minister. I do not know how much amount has been recovered. Kindly take steps to recover the amounts due from K S.R.T C.

Then, there is a proposal to construct lodging Boarding for tourists in Shah Abdul Razak Kadri Durgah co pound. I was told the plans and estimates have already been submitted to the Wakf Board. If this works is taken up we c n construct shoping centres in wakf sites at Bijapur. So, I request the Hon. Minister to entrust that work to the Wakf Board Corporation and see that it is completed at an early date.

Sir, there is some difficulty in recove ing the Wakf dues through the Revenue Department. Therefore, I suggest that Wakf Act be suitably amended and powers should be given to the Wakf Board to recover the Wakf dues.

Another thing is the Wakf Board and staff both in the Board and at the district level are not working properly. with the result the collection work of the Wakf contribution is suffering. Therefore, steps should be taken to recruit honest and efficient people, And then except in two districts, honorarim is not paid to the Chairman of the District, Wakf Committees. If honorarim is paid to the all the Chairman throught the state, they can go n tour and watch the work of the Wakf Boards and they may also assist the staff in collecting the Wakf contributions.

I would like to make one more submission. The Archeological Department has imposed restrictions. Thus, it has become difficult for the Muslims to pray in the mosques. So, suitable instruction may kindly be issued to concerned authorities in this behalf.

As regards as Wakf Board Office I submit that there is no suitable building in Bijapur City for Wakf Board At present there is a promises by the side of the gate of Jumma Masjid Bijapur which can be used for offices. Proposals to shift the premises has already been sent. N› action has been taken up till now. I request the Hon. Minister to expedite the matter.

Sir, although Bijapur has the largest number of Wakf properties and monuments not a single person is appointed as a Member to the State Wakf Board Corporation. Even last year I had requested the Minister to consider this point. I hope the Minister will concede the request of the Bijapur people atleast this time.

Regarding Shah Abdul Razak Qadri Durgah Committee I submit that it has been constituted long back by the Deputy Commissioner. I would be request the Government to take necessary steps to reconstitu e that Committee with good persons immediately,

Lastly, I would like to say a word about Shahi Idagah Bijapur It is a long standing demand. In this connection I request that arrangements be made either to give back the rooms of Shahi Idgah occupied by the Police Department or to pay compensation to the Jamat of Shahi Idagah, Bijapur.

These are all my suggestions and I hope the Hon. Minister will bring them into action.

With these words I conclude and thank the Chair.

† ಶ್ರೀ ಧರ್ಮಸಿಂಗ್ : ನಾರಾಯಣಸಿಂಗ್ (ಜೇವರ್ಗಿ).— ಮಾನ್ಯ ಅಧ್ಯಕ್ಷರೆ,, ಕೈಗಾರಿಕಾ ಮಂತ್ರಿಗಳು ಹಾಗೂ ರೇಷ್ಮೆ ಇಲಾಖಾ ಮಂತ್ರಿಗಳು ಮಂಡಿಸಿರತಕ್ಕ ಡಿಮ್ಯಾಂಡ್ ನಂಬರು, ೫, ೭, ೫೩, ೮, ಇವುಗಳನ್ನು ನಾನು ಬೆಂಬಲಿಸಿ, ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತಿದ್ದೇನೆ. ಕೈಗಾರಿಕಾ ಮಂತ್ರಿಗಳು ಇವೊತ್ತಿನ ದಿವಸ ಕರ್ನಾಟಕ ರಾಜ್ಯದ ಬಹಳ ದೊಡ್ಡದಾದ ಖಾತೆಯನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಇವೊತ್ತಿನ ದಿವಸ ಕೈಗಾರಿಕೆ ಇಲಾಖೆ ಬಹಳ ದೊಡ್ಡದಾಗಿದ್ದು ಅದರ ಮೇಲೆ ಬಹಳ ಜವಾಬ್ದಾರಿ ಕೂಡ ಇದೆ. ಈ ದೇಶದಲ್ಲಿರತಕ್ಕ ಜನಸಾಮಾನ್ಯರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಸುಧಾರಿಸಬೇಕಾದರೆ, ಅವರ ಜೀವನದಲ್ಲಿ ಕೂಡ ಒಂದು ಒಳ್ಳೆಯ ದಿನವನ್ನು ರಾಜ್ಯದಲ್ಲಿ ನೋಡಬೇಕಾದರೆ ಅವರು ಬಹಳಷ್ಟು ಪ್ರಾಮಾಣಿಕತೆಯಿಂದ ದಕ್ಷತೆಯಿಂದ ಈ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಆಗಿರತಕ್ಕಂತಹ ಕೆಲಸಗಳಿಗೂ ಕೂಡ ಹೆಚ್ಚಿನ ಗಮನ ಕೊಡಬೇಕು. ಇವೊತ್ತಿನ ದಿವಸ ಈ ದೇಶದಲ್ಲಿ ಏನು ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಇದೆ ಅದನ್ನು ಕೂಡ ಹೋಗಲಾಡಿಸಲು ಪ್ರಯತ್ನ ಮಾಡಬೇಕು. ಇವೊತ್ತು ದಿನೇ ದಿನೇ ನಮ್ಮ ರಾಜ್ಯದಲ್ಲೇ ಅಲ್ಲ ದೇಶದಲ್ಲೂ ಕೂಡ ಎಜುಕೇಟೆಡ್ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಬಹಳವಾಗುತ್ತಿದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ರಾಜ್ಯದ ಎಲ್ಲಾ ಕಡೆ ಗಮನಕೊಟ್ಟು ಈ ಕೈಗಾರಿಕೆಯಲ್ಲಿ ಆಗತಕ್ಕ ಅಭಿವೃದ್ಧಿ ಕೇವಲ ಬಂದೆರಡು ಮೂರು ಜಿಲ್ಲೆಗಳಿಗೆ ಸೀಮಿತವಾಗದೆ ರಾಜ್ಯದ ಎಲ್ಲಾ ಭಾಗಗಳಿಗೂ ಗಮನ ಕೊಡಬೇಕು. ನಾನು ಬಂದದ್ದು ಗುಲ್ಬರ್ಗ ಜಿಲ್ಲೆಯಿಂದ ಈಗ ನನ್ನ ಮಿತ್ರರಾದ ಬಾವಿಯವರು ಹೇಳಿದರು ಅದನ್ನು ಕೇಳಿದ ಮೇಲೆ ನನ್ನ ಮನಸ್ಸಿನಲ್ಲಿಯೂ ಕೂಡ ಶಂಕೆ ಬರುತ್ತಿದೆ. ನಮ್ಮ ಭಾಗದ ಜನರೂ ಕೂಡ ಕೇಳುತ್ತಿದ್ದಾರೆ ಹೈದರಾಬಾದ್ ಕರ್ನಾಟಕದಲ್ಲಿ ೧೯೭೬-೭೭ರ ನಂತರ ಇವೊತ್ತಿನವರೆಗೂ ಕೂಡ ಯಾವುದೇ ರೀತಿಯ ದೊಡ್ಡ ಕೈಗಾರಿಕೆಗಳು ಮುಂದೆ ಬರುತ್ತಿಲ್ಲ ಈ ಬಗ್ಗೆ ಸರ್ಕಾರದವರು ಏತಕ್ಕೆ ಗಮನ ಕೊಡುತ್ತಿಲ್ಲ ಎನ್ನುವ ಶಂಕೆ ಇವೊತ್ತು ಜನಸಾಮಾನ್ಯರಲ್ಲಿ ಬರುತ್ತಿವೆ, ಇದು ನಮ್ಮ ಮನಸ್ಸಿನಲ್ಲಿಯೂ ಕೂಡ ಬರುತ್ತದೆ. ಈಗ ಅಧ್ಯಕ್ಷರು, ತಾವು ಕೂಡ ಕೆಲವು ಕಾಲ ಈ ರಾಜ್ಯದಲ್ಲಿ ಕೈಗಾರಿಕಾ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇ ನೆಂದರೆ ಈ ತರಹದ ಉದಾಸೀನತೆ ಏನಿದೆ ಅದನ್ನು ಹೋಗಲಾಡಿಸಲು ತಾವು ಯಾವ ರೀತಿ ಕ್ರಮ ಕೈಗೊಳ್ಳುವವರಿದ್ದೀರಿ ಎಂಬುದನ್ನು ಈ ಸದನದ ಮೂಲಕ ಕೇಳಲು ಬಯಸುತ್ತೇನೆ. ಸಾಮೇಬರವರಿಗೆ ಉರ್ದುನಲ್ಲಿ ಆಸಕ್ತಿ ಇದೆ.

(In urdu)

ಎಲ್ಲಿಯವರೆಗೆ ಸಹನೆ ಮಾಡಿಕೊಂಡು ಬರಲಿಕ್ಕೆ ಸಾಧ್ಯ. ಆದಕಾರಣ ಮಾನ್ಯ ಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಮಹಾರಾಷ್ಟ್ರದಲ್ಲಿ ಶಂಕರ್‌ರಾವ್ ಚವಾಣ್ ಮುಖ್ಯ ಮಂತ್ರಿಗಳಾಗಿದ್ದಾಗ ಯಾರಾದರೂ ಹೊಸದಾಗಿ ಮರಾಠವಾಡದಲ್ಲಿ ಕಾರ್ಖಾನೆ ಪ್ರಾರಂಭ ಮಾಡುವುದಾದರೆ ಲೈಸನ್ಸ್ ಕೊಡುತ್ತೇವೆಂದು ಹೇಳುತ್ತಿದ್ದರು. ಈ ರೀತಿ ಮರಾಠವಾಡ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕೂಡ ಅಲ್ಲಿ ಮಾಡಿದ್ದಾರೆ. ಆದೇ ರೀತಿ ಇವೊತ್ತಿನ ದಿವಸ ೪೦೦ ಮೈಲಿ ದೂರ ಇರತಕ್ಕ ಬೀದರ್, ಗುಲ್ಬರ್ಗ, ರಾಯಚೂರು, ಉತ್ತರ ಕರ್ನಾಟಕ ಜಿಲ್ಲೆಗಳು ಏನಿವೆ ಅವುಗಳಿಗೆ ಬೆಂಗಳೂರಿನ ಆಫೀಸಿನಲ್ಲಿಯೇ ಕುಳಿತು ಕೊಂಡು ಸಹಾಯ ಮಾಡಲಿಕ್ಕೆ ಆಗುವುದಿಲ್ಲ. ಇವೊತ್ತು ಬೆಂಗಳೂರು ಮತ್ತು ಹೈದರಾಬಾದ್ ಕರ್ನಾಟಕಕ್ಕೆ ಬಹಳ ದೂರ ಇದೆ. ಆದುದರಿಂದ ಹೈದರಾಬಾದ್ ಕರ್ನಾಟಕ ರಿಜನಲ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡ್ ಮಾಡಿ, ಅಲ್ಲಿರತಕ್ಕ ಜನಗಳಲ್ಲಿ ನಮಗೆ ಕಾರ್ಖಾನೆಗಳು ಬರುತ್ತಿಲ್ಲ ಎನ್ನುವ ಮನೋಭಾವನೆ ಏನಿದೆ ಅದನ್ನು ದೂರ ಮಾಡಲಿಕ್ಕೋಸ್ಕರ ತಾವು ಈ ಬೋರ್ಡ್ ಮಾಡಬೇಕೆಂದು ಹೇಳುತ್ತೇನೆ. ಗುಲ್ಬರ್ಗದಲ್ಲಿ ವಿಶ್ವವಿದ್ಯಾನಿಲಯ ಆಗುತ್ತಿದೆ. ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಗುಲ್ಬರ್ಗಕ್ಕೆ ಪ್ರಾಮುಖ್ಯತೆ ಇರುವಾಗ ಅಲ್ಲಿ ಇಂಡಸ್ಟ್ರಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ತಾವು ಮೊದಲು ಲೋಹಿಯಾ ಅವರ ಆರ್ಥಿಕ ವಿಚಾರ ತೆಗೆದು ಕೊಂಡು ತಿಳಿದವರು. ಇವೊತ್ತು ಮೊದಲಿನ ಅಜೀಜ್‌ಸೇತ ಇದ್ದಾರೆಯೋ ಅಥವಾ ಬದಲಾಗಿದ್ದಾರೆಯೇ ಎಂದು ಜನರು ನೋಡುತ್ತಿದ್ದಾರೆ. ಇವೊತ್ತು ಜನರ ಮನಸ್ಸಿನಲ್ಲಿರತಕ್ಕ ಭಾವನೆಯನ್ನು ತೊಡೆದು ಹಾಕುವ ಸಲುವಾಗಿ ಸರಿಯಾಗಿ ಕೆಲಸ ಮಾಡಬೇಕಾಗಿದೆ. ಇನ್ನು ಗುಲ್ಬರ್ಗ ಭಾಗದಲ್ಲಿ ಎ.ಸಿ.ಸಿ. ಫ್ಯಾಕ್ಟರಿ ವಾಡಿಯ ಸಿಮೆಂಟ್ ಫ್ಯಾಕ್ಟರಿ ಇದೆ. ಆದರೆ ಅಲ್ಲಿರತಕ್ಕಂತಹ ಜನರಿಗೆ ಕೆಲಸ ಸಿಕ್ಕುತ್ತಿಲ್ಲ. ಈ ರೀತಿಯ ತೊಂದರೆಯನ್ನು ಏತಕ್ಕೆ ಕೊಡುತ್ತಾರೆ ಅನ್ನುವುದು ಗೊತ್ತಿಲ್ಲ. ಇವೊತ್ತು ಕೇಂದ್ರ ಸರ್ಕಾರದವರೇ ಫ್ಯಾಕ್ಟರಿ ಹಾಕಲಿ, ಯಾರೇ ಫ್ಯಾಕ್ಟರಿ ಹಾಕಲಿ ಸ್ಥಳದಲ್ಲಿರತಕ್ಕ ಜನರಿಗೆ ಎಂಪ್ಲಾಯ್‌ಮೆಂಟ್ ಆಪರ್‌ಚ್ಯುನಿಟಿ ಕೊಡಬೇಕು. ಅಲ್ಲಿ ಜನರಿಗೆ ಫ್ಯಾಕ್ಟರಿ ಇದ್ದರೂ ಕೆಲಸ ಸಿಕ್ಕುವುದಿಲ್ಲ ಎನ್ನುವುದು ಬಂದಿದೆ ಆದುದರಿಂದ ಈ ಬಗ್ಗೆ ತಾವು ಏತಕ್ಕೆ ಡಿಸ್ಕ್ರಿಮಿನೇಟ್ ಮಾಡುತ್ತಿದ್ದಾರೆಂದು ಕೇಂದ್ರದಲ್ಲಿ ಸಮಾಲೋಚಿಸಿ ಅಲ್ಲಿರತಕ್ಕಂತಹ ಫ್ಯಾಕ್ಟರಿಗೆ ಅಲ್ಲಿಯ ಜನರನ್ನೇ ತೆಗೆದುಕೊಳ್ಳುವಂತೆ ಮಾಡಬೇಕು. ಇನ್ನು ತಾವು ಸರ್ಕಾರದ ವತಿಯಿಂದ ಒಬ್ಬ ಡೈರೆಕ್ಟರ್‌ನ್ನು ಏನು ನಾಮಿನೇಟ್ ಮಾಡುತ್ತೀರಾ ಅವರಿಗೆ ಏನೂ ಬೆಲೆ ಇರುವುದಿಲ್ಲ. ಸಣ್ಣ ಪುಟ್ಟ ಎಂಪ್ಲಾಯ್‌ಮೆಂಟ್ ಬಗ್ಗೆ ಈ ಡೈರೆಕ್ಟರ್‌ಗೆ ಹೇಳಿದರು ಆಗುವುದಿಲ್ಲ. ಅವರಿಗೆ ಬೆಲೆ ಇಲ್ಲ. ಈ ರೀತಿ ಏತಕ್ಕೆ ಮಾಡುತ್ತಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡಬೇಕು. ಇನ್ನೂ ನಮ್ಮ ರಾಜ್ಯದಲ್ಲಿರತಕ್ಕ ಫ್ಯಾಕ್ಟರಿಗಳು ಏನಿವೆ, ಆ ಫ್ಯಾಕ್ಟರಿಗಳಿಗೆ ಆ ಸ್ಥಳೀಯ ಜನರನ್ನೇ ತೆಗೆದುಕೊಳ್ಳುವಂತಹ ವಾತಾವರಣ ನಿರ್ಮಾಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರೂರಲ್ ಓರಿಯಂಟೇಷನ್ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಕೈಗಾರಿಕೆಗಳನ್ನು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾಡಿ, ಜಿಲ್ಲೆಗಳಲ್ಲಿ ಮಾಡಿ, ಆದರೆ ತಾಲ್ಲೂಕು ಮಟ್ಟದಲ್ಲಿ ಹಳ್ಳಿಗಳ ಮಟ್ಟದಲ್ಲಿ ಏನೇನು ಲೋಕಲ್ ರಾಮೆಟಿಯಲ್ಸ್ ಅವೇಲಬಲ್ ಇದೆ ಅಲ್ಲಿರತಕ್ಕಂತಹ ಜನರು ಯಾರು ಯಾರು ಕೈಗಾರಿಕೆಯಲ್ಲಿ ಪ್ರವೀಣರಿದ್ದಾರೆ ಅವರಿಗೆ ಅನುಕೂಲ ಆಗಬೇಕಾದರೆ ಈ ದೇಶದಲ್ಲಿ ಒಂದು ತರಹ ಒಳ್ಳೆಯ ವಾತಾವರಣ ನಿರ್ಮಾಣ ಮಾಡಬೇಕಾಗುತ್ತದೆ. ಅದಕ್ಕೆ ಇಂಡಸ್ಟ್ರಿಯಲ್ ರೆವಲ್ಯೂಷನ್ ಆಗಬೇಕಾಗುತ್ತದೆ. ಏನೋ ವಿಧಾನ ಸಭೆಯಲ್ಲಿ ಹೇಳಿದ್ದಾರೆ ಅಂದರೆ ಆಗುವುದಿಲ್ಲ. ಇದಕ್ಕೆಲ್ಲಾ ಹಳ್ಳಿಗಳಲ್ಲಿರತಕ್ಕ ಅಧಿಕಾರಿಗಳು ಸಹೃದಯದಿಂದ ಹಗಲು ರಾತ್ರಿ ಕೆಲಸ ಮಾಡಬೇಕಾಗುತ್ತದೆ. ಇವೊತ್ತು ಖಾದಿ ಅಂಡ್ ವಿಲೇಜ್ ಇಂಡಸ್ಟ್ರಿ ಇದೆ. ಸಾಕಷ್ಟು ಹಣ ಇದ್ದರೂ ಕೆಲಸ ಮಾಡುತ್ತಿಲ್ಲ. ಅದೇ ರೀತಿ ಹ್ಯಾಂಡಿಕ್ರಾಫ್ಟ್ ಇದೆ. ಅದು ಬಹಳ ಫೇಮಸ್ ಇದೆ ಅಲ್ಲಿ ಏನು ಎನ್‌ಕರೇಜ್‌ಮೆಂಟ್ ಕೊಡುತ್ತೀರಾ ಅದೇ ರೀತಿ ಬೀದರ್‌ನಲ್ಲಿರತಕ್ಕಂತಹ ಕೈಗಾರಿಕೆಯಲ್ಲಿ ಏನು ಮಾಡಿದ್ದೀರಾ ಎಂದು ಕೇಳುತ್ತೇನೆ.

೪.೦೦ ಪಿ.ಎಂ.

ಇವತ್ತಿನ ದಿವಸ ಹ್ಯಾಂಡ್‌ಲೂಂ ವಿಚಾರ ಕೂಡ ತಮಗೆ ತಿಳಿದಿದೆ. ತಾವು ಗುರುಮಠಕಲ್‌ಗೆ ಬಂದಿದ್ದಾಗ ನಾನೂ ಕೂಡ ತಮ್ಮೊಡನೆ ಬಂದಿದ್ದೆ. ಅಲ್ಲಿಗೆ ಹ್ಯಾಂಡ್‌ಲೂಂ ಅನುಕೂಲವನ್ನು ಒದಗಿಸುತ್ತೇನೆಂದು ತಾವು ಹೇಳಿದ್ದಿರಿ. ಆದರೆ ಇದುವರೆಗೂ ಅಲ್ಲಿ ಹ್ಯಾಂಡ್‌ಲೂಂ ಅನುಕೂಲತೆಯನ್ನು ಒದಗಿಸಿಲ್ಲ ನಾನು ಆ ಕಡೆ ಹೋದಾಗ ಅಲ್ಲಿನ ಜನರು ಬಂದು ನನ್ನನ್ನು ಕೇಳುತ್ತಿದ್ದಾರೆ. ಆದ್ದರಿಂದ ತಾವು ನನ್ನ ಕ್ಷೇತ್ರದ ಆಳಂದ, ಗುರುಮಠಕಲ್ ಇನ್ನೂ ಮುಂತಾದ ಕೆಲವು ಕಡೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ

ಹ್ಯಾಂಡ್‌ಲೂಂ ಕೈಗಾರಿಕೆಯನ್ನು ಪ್ರಾರಂಭ ಮಾಡಿಕೊಡಬೇಕು. ಇದೇ ಅಲ್ಲದೇ ಖಾಸಗಿ ಜನರು ಯಾರಾದರೂ ಮುಂದೆಬಂದು ಈ ಉದ್ಯೋಗವನ್ನು ನಾವು ಪ್ರಾರಂಭ ಮಾಡುತ್ತೇವೆಂದು ಹೇಳಿದರೆ ಅಂಥವರಿಗೆ ಸಾಕಷ್ಟು ಸಹಾಯ, ಪ್ರೋತ್ಸಾಹ ಈ ಸರ್ಕಾರದಿಂದ ಸಿಕ್ಕುತ್ತಿಲ್ಲ. ಸ್ವಾಮಿ ಇಲ್ಲಿರತಕ್ಕ ಪ್ರತಿಯೊಂದು ಲೋಪ ದೋಷಗಳನ್ನೂ ನಾನು ಎತ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ನಿಮ್ಮ ಇಲಾಖೆಯಿಂದ ಸಾಕಷ್ಟು ಕೆಲಸ ಕಾರ್ಯಗಳು ನಮ್ಮ ಭಾಗದಲ್ಲಿ ಆಗಬೇಕಾದ್ದು ಬಹಳ ದಿವಸದಿಂದಲೂ ಇವೆ. ಆದರೆ ಇದುವರೆಗೂ ಅದನ್ನು ತಾವು ಮಾಡಿಲ್ಲ. ಇದು ಎಫೆಕ್ಟೀವ್ ಆಗಿ ಆಗಬೇಕಾದರೆ ತಮ್ಮ ಇಲಾಖೆ ಒಂದು ವಿಶೇಷ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಅದು ಹೇಳಬಯಸುತ್ತೇನೆ. ಇವತ್ತು ನಮ್ಮ ಕರ್ನಾಟಕದ ಇತರೆ ಭಾಗಗಳಿಗಿಂತಲೂ ಹೆಚ್ಚಿನ ರೀತಿಯಲ್ಲಿ ನಮ್ಮ ಭಾಗಕ್ಕೆ ಅನ್ಯಾಯವಾಗುತ್ತಿದೆ. ಈಗಿರತಕ್ಕ ಮಾನ್ಯ ಸಚಿವರು ಮೈಸೂರು ನಗರದವರು, ಹಿಂದೆ ಇದ್ದ ಸಚಿವರು ಮಂಡ್ಯದವರು. ಆದ್ದರಿಂದ ನಾನು ಕೇಳಿಕೊಳ್ಳುವುದೇನೆಂದರೆ, ತುಮಕೂರು, ಮಂಡ್ಯ, ಮೈಸೂರು ವಿಭಾಗಗಳಿಗೆ ಹೆಚ್ಚು ಗಮನ ಕೊಡದೆ ನಮ್ಮ ಹೈದರಾಬಾದ್ ಭಾಗಕ್ಕೆ ವಿಶೇಷ ಗಮನ ಕೊಟ್ಟು ಅಲ್ಲಿ ಒಂದು ರೀಜನಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಿನ್ನೆಯ ದಿವಸ ಮಾನ್ಯ ಸದಸ್ಯರಾದ ಶ್ರೀಮಾನ್ ವಿರೂಪಾಕ್ಷಪ್ಪ ಇಳಿಗೇರವರು ಹೇಳಿದಂತೆ ತಾವು ಆವೇಶಪೂರಿತವಾಗಿ ಸಭೆಗೆ ಬರುತ್ತೀರಿ, ಅನಂತರ ಇಲ್ಲಿಗೆ ಬಂದಮೇಲೆ ತಣ್ಣಗಾಗುತ್ತೀರಿ. ಆದ್ದರಿಂದ ತಾವು ಸಭೆಗೆ ಬರುವಾಗ ಏನು ಆವೇಶದಿಂದ ಬರುತ್ತೀರಿ ಅದೇ ರೀತಿಯಲ್ಲಿ ಕೆಲಸಗಳನ್ನೂ ಕೂಡಮಾಡಬೇಕು.

ಸ್ವಾಮಿ, ಇನ್ನು ರೇಷ್ಮೆ ಇಲಾಖೆಯ ಬೇಡಿಕೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದು ಕೇವಲ ಮೈಸೂರು ಭಾಗದಲ್ಲಿ ಮಾತ್ರ ಬೆಳೆಯುವಂಥಾದ್ದು, ಉತ್ತರ ಕರ್ನಾಟಕದಲ್ಲಿ ಬೆಳೆಯುವುದಿಲ್ಲ ಎಂಬ ಭಾವನೆ ಮೊದಲಿನಿಂದಲೂ ಇದ್ದುದರಿಂದ ನಮ್ಮ ಭಾಗದವರು ಈ ರೇಷ್ಮೆ ಬೆಳೆಯ ಬಗ್ಗೆ ಕೃತಕವಾದ ಸಮಾಧಾನದಲ್ಲಿದ್ದರು. ಆದರೆ ಇವತ್ತಿನ ದಿವಸ ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡಿ ನಮ್ಮ ಭಾಗದ ಜನರಿಗೆ ರೇಷ್ಮೆ ಬೆಳೆದು ಹೊಸ ಜೀವನ ನಡೆಸುವಂಥ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಮೈಸೂರು, ಮಂಡ್ಯ, ಜಿಲ್ಲೆಗಳಲ್ಲಿ ಬೆಳೆಯತಕ್ಕ ಗುಣಮಟ್ಟದ ರೇಷ್ಮೆಯನ್ನು ಗುಲ್ಬರ್ಗಾ ಜಿಲ್ಲೆಯಲ್ಲಿ ಬೆಳೆಯುವುದಕ್ಕೆ ಅಲ್ಲಿನ ಹವಾಗುಣ ನೀರು, ಮಣ್ಣು ಇವು ಅನುಕೂಲವಾಗಿಲ್ಲವೆಂದು ಬೆಳೆಯಿಸುತ್ತಿರಲಿಲ್ಲ. ನಮಗೆ ಸ್ವಾತಂತ್ರ್ಯ ಬಂದಾಗಿನಿಂದ ಸುಮಾರು ೧೯೭೪-೭೫ನೇ ಸಾಲಿನವರೆಗೂ ಪ್ರಯತ್ನಿಸಿರಲಿಲ್ಲ. ಅನಂತರ ಈ ರೇಷ್ಮೆ ಇಲಾಖೆಯಲ್ಲಿ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಶ್ರೀ ಬಾಲಸುಬ್ರಮಣ್ಯಂನವರು ನಮ್ಮ ಭಾಗಕ್ಕೆ ಆಗಮಿಸಿ ಅಲ್ಲಿನ ನೀರು, ಮಣ್ಣು, ಹವಾಗುಣ ಇವುಗಳನ್ನು ಪರೀಕ್ಷಿಸಿ ಅಲ್ಲೂ ಕೂಡ ರೇಷ್ಮೆ ಬೆಳೆಯನ್ನು ಬೆಳೆಯಬಹುದೆಂದು ತಿಳಿಸಿ ಅದರಂತೆ ಪ್ರಾರಂಭ ಮಾಡಿದರು ಇದರಿಂದಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ನನ್ನ ಕ್ಷೇತ್ರವಾದ ಜೇವರ್ಗಿಯಲ್ಲಿ ಈಗ ಸುಮಾರು ೨೦೦-೩೦೦ ಎಕರೆಗಳಲ್ಲಿ ರೇಷ್ಮೆ ಬೆಳೆಯುತ್ತಿದ್ದಾರೆ. ಈ ಸಾರಿ ಸುಮಾರು ೫೦೦-೬೦೦ ಎಕರೆಗಳಲ್ಲಿ ಈ ಬೆಳೆಯನ್ನು ಬೆಳೆಯುವ ಉದ್ದೇಶ ಇಟ್ಟುಕೊಂಡಿದ್ದಾರೆ. ಅಂಥ ಒಬ್ಬ ಡೈನಮಿಕ್ ನಿರ್ದೇಶಕರು ಇದ್ದುದರಿಂದ ನಮ್ಮ ಭಾಗದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಬಹುದೆಂದು ತೋರಿಸಿಕೊಟ್ಟರು. ಆದ್ದರಿಂದ ಅವರನ್ನು ನಾನು ಅಭಿನಂದಿಸುತ್ತೇನೆ. ನಮ್ಮ ಭಾಗದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲು ಪ್ರಾರಂಭ ಮಾಡಿದ್ದರಿಂದ ನನ್ನ ಊರಾದ ನೆಲುಗಿಯಲ್ಲಿ ಬಿ.ಎ.ಎಂ.ಎ ಮಾಡಿಕೊಂಡಿರತಕ್ಕ ಯುವಕರು ಕೆಲಸಕ್ಕೆ ಸೇರದೇ ಈ ರೇಷ್ಮೆ ಬೆಳೆಯುವುದರಲ್ಲಿ ಬಹಳ ಆಸಕ್ತಿಯನ್ನು ವಹಿಸಿದ್ದಾರೆ ಇವರಿಗೆ ತಾವು ಸಾಕಷ್ಟು ಹಣ ಸಹಾಯ ಮಾಡಬೇಕು. ಸ್ವಾಮಿ, ಈ ಬೆಳೆ ಬೆಳೆಯುವ ಸಲವಾಗಿ ವಿಶ್ವ ಬ್ಯಾಂಕ್‌ನಿಂದ ನೆರವು ನೀಡುತ್ತಿದ್ದಾರೆ ತಾವು ಈ ನೆರವನ್ನು ಪಡೆದು ರೇಷ್ಮೆಬೆಳೆ ಬೆಳೆಯುವಕ್ಕಪರ್ಸಿರಿಗೂ ಸಬ್ಸಿಡಿ ರೂಪದಲ್ಲಿ ಹಣಸಹಾಯ ಮಾಡಿ ಇನ್ನೂ ಹೆಚ್ಚಿಗೆ ರೇಷ್ಮೆ ಬೆಳೆಯುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡಬೇಕು ಎಂತು, ಇದಕ್ಕೆಸೂಕ್ತ ಬೆಲೆಯನ್ನು ನಿಗದಿ ಮಾಡಬೇಕು. ತಾವು ಇಷ್ಟಕ್ಕೇ ಸುಮ್ಮನಾಗದೆ, ರೇಷ್ಮೆ ಬೆಳೆಯುವ ಪ್ರತಿಯೊಂದು ಭಾಗಕ್ಕೂ ಹೋಗಿ ಸ್ಥಳಪರಿಶೀಲನೆ ಮಾಡಿ, ಅವರಿಗೆ ಅತ್ಯಗತ್ಯವಾಗಿ ನೀಡಬೇಕಾದ ಸಹಾಯ ಸೌಲಭ್ಯಗಳನ್ನು ನೀಡಬೇಕು. ನಮ್ಮ ಭಾಗದಲ್ಲಿ ಜೋಳಕ್ಕೆ ಸರಿಯಾದ ಬೆಲೆ ಸಿಕ್ಕದಿರುವುದರಿಂದ ಈಗ ಒಂದೊಂದೇ ಎಕರೆಯಲ್ಲಿ ರೇಷ್ಮೆ ಬೆಳೆ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅಲ್ಲಿ ಜನಗಳು ಇದರ ಬಗ್ಗೆ ಆಸಕ್ತಿ ವಹಿಸಿ ಬಹಳ ಪ್ರವೀಣರಾಗಿದ್ದಾರೆ. ೧೯೫೫ರ ನಂತರ ಈ ಇಲಾಖೆಯವರು ನಮ್ಮ ಭಾಗದಲ್ಲಿ ಸಾಕಷ್ಟು ಸಂಶೋಧನೆಗಳನ್ನೂ ನಡೆಸಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇದೂ ಕೂಡ ಸರಿಯಲ್ಲ, ಇನ್ನೂ ಹೆಚ್ಚು

ಹೆಚ್ಚು ಹಣವನ್ನು ಈ ಬಾಬಿಗೋಸ್ಕರ ಒದಗಿಸಬೇಕೆಂದು ರೇಷ್ಮೆ ಇಲಾಖೆಯ ಮಾನ್ಯ ಸಚಿವರನ್ನು ಕೇಳಿ ಕೊಂಡರು ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಟಿ. ಮಾಯಣ್ಣ (ಹುಲಿಯೂರುದುರ್ಗ):— ಮಾನ್ಯ ಅಧ್ಯಕ್ಷರೆ, ಕೈಗಾರಿಕೆ, ಸಣ್ಣ ಕೈಗಾರಿಕೆ ಹಾಗೂ ರೇಷ್ಮೆ ವ್ಯವಸಾಯದ ಬಗ್ಗೆ ಸರ್ಕಾರಕ್ಕೆಕೆಲವು ಸಲಹೆಗಳನ್ನು ಮಾತ್ರ ಕೊಡಬಯಸುತ್ತೇನೆ ಪುರಾತನ ಕಾಲದಿಂದಲೂ ನಮ್ಮ ದೇಶ ರೇಷ್ಮೆ ವ್ಯವಸಾಯಕ್ಕೆ ಪ್ರಸಿದ್ಧವಾದುದು. ನಮ್ಮ ಪ್ರದೇಶದಲ್ಲಿ ನಾವುಪೆಚ್ಚಿಗೆ ಮೈಸೂರು ತಳಿಯ ರೇಷ್ಮೆಯನ್ನೇ ಬೆಳೆದು ಬಂದ್ದಿದ್ದೇವೆ. ಆದುದರಿಂದ ಇಲ್ಲಿ ಹೈಬ್ರಿಡ್ ಅಂದರೆ ವಿಶ್ರತಳಿಯನ್ನು ಬೆಳೆಯುವುದಕ್ಕಾಗುವುದಿಲ್ಲ. ಕರ್ನಾಟಕದ ಎಲ್ಲ ಭಾಗಗಳಿಗೂ ಈ ವೈಸೂರು ತಳಿಯನ್ನೇ ಸರಬರಾಜು ಮಾಡಬೇಕಾಗಿದೆ. ಸಾಮಾನ್ಯವಾಗಿ ವರ್ಷಕ್ಕೆ ೬ ಬೆಳೆಯನ್ನು ಬೆಳೆಯುತ್ತೇವೆ ಆದರೆ ಸರಿಯಾಗಿ ಬೆಲೆ ಬರುವುದಿಲ್ಲ. ಕೇವಲ ಒಂದು ಬೆಳೆಯಲ್ಲಿ ಮಾತ್ರ. ಇನ್ನುಳಿದ ೫ಬೆಳೆಗಳಲ್ಲಿ ಅಷ್ಟು ಲಾಭ ಬರದೆ ರೈತರು ಬಹಳ ಕಷ್ಟದಲ್ಲಿದ್ದಾರೆ. ತಾವು ಬೆಳೆದಿದ್ದರಲ್ಲಿ ತಮ್ಮ ಜೀವನ ಮಾಡುವುದ ಕ್ಕಾಗುವುದಿಲ್ಲ. ಈ ಕೈಗಾರಿಕೆ ಸಾಮಾನ್ಯವಾಗಿ ಹಳ್ಳಿಗಾಡಿನಲ್ಲಿ ಬಡವರಿಗೆ, ಶ್ರೀಮಂತರಿಗೆ, ವಿದ್ಯಾವಂತರಿಗೆ ಬಹಳ ಲಾಭದಾಯಕವಾದುದಾಗಿದೆ. ಒಂದೊಂದು ವಿಭಾಗದಲ್ಲೂ ಒಬ್ಬ ರೀಜನಲ್ ಆಫೀಸರ್, ಒಬ್ಬ ಸೀನಿಯರ್ ಆಫೀಸರ್, ಒಬ್ಬ ಡೆಪ್ಯುಟಿ ಡೈರೆಕ್ಟರ್ ಹೀಗೆ ಇರುತ್ತಾರೆ. ಈ ಅಧಿಕಾರಿಗಳು ರೇಷ್ಮೆ ಬೆಳೆಯ ತಕ್ಕ ಪ್ರತಿಯೊಬ್ಬ ರೈತನ ಬಳಿಗೂ ಹೋಗಿ ಅಲ್ಲಿ ಆ ರೈತ ಯಾವರೀತಿ ತೋಟವನ್ನು ಹದ ಮಾಡುತ್ತಾನೆ ಹುಳುವನ್ನು ಯಾವರೀತಿ ತ್ಯಾಗಮಾಡುತ್ತಾನೆ, ಇತ್ಯಾದಿಗಳನ್ನು ನೋಡಿ ರೈತರಿಗೆ ಮಾರ್ಗದರ್ಶನ ಮಾಡತಕ್ಕ ಕೆಲಸವನ್ನು ಮಾಡುತ್ತಿಲ್ಲ.

ಅಧಿಕಾರಿಗಳು ಈಗ ಏನು ಮಾಡುತ್ತಿದ್ದಾರೆಂದರೆ ಪೇಟೆಗಳಲಿ ಸೇರಿಕೊಂಡು ಹಳ್ಳಿಗಳಲ್ಲಿರತಕ್ಕಂಥ ರೈತನ ಕಷ್ಟ ಸುಖಗಳನ್ನು ನೋಡುತ್ತಿಲ್ಲ. ಆದುದರಿಂದ ಹಳ್ಳಿಗಳಲ್ಲಿ ಪ್ರತಿಯೊಬ್ಬ ರೈತನು ಅವನಿಗೆ ಸೇರಿದಂಥ ಪ್ರದೇಶದಲ್ಲಿ ಅಥವಾ ತೋಟದಲ್ಲಿ ಏನು ಬೆಳೆಯನ್ನು ಬೆಳೆಯುತ್ತಾನೆ, ಎಷ್ಟು ಬೆಳೆಯನ್ನು ಬೆಳೆದಿರುತ್ತಾನೆ, ಆದರ ವಿಸ್ತೀರ್ಣವೆಷ್ಟು ಎಂಬ ವಿವರಗಳಲ್ಲಿ ಒಂದು ರಿಜಿಸ್ಟರನ್ನು ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಹತ್ತು ಯಾವ ಯಾವ ಕಾಲದಲ್ಲಿ ಏನೇನು ಬೆಳೆಯನ್ನು ಬೆಳೆದುಕೊಟ್ಟಿರುತ್ತಾನೆ. ಮತ್ತೆ ಏನು ಬೆಳೆಯನ್ನು ಬೆಳೆಯುತ್ತಾನೆ, ಅವನಿಗೆ ಯಾವ ಬಿತ್ತನೆ ಬೀಜ ಬೇಕಾಗುತ್ತದೆ ಎಂಬ ವಿಷಯಗಳನ್ನೆಲ್ಲ ಆಗಾಗ್ಗೆ ತಿಳಿದುಕೊಂಡು ಆದಕ್ಕೆ ತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾದ್ದು ಬಹಳ ಅವಶ್ಯಕವಿರುತ್ತದೆ.

ಸಾಮಾನ್ಯ ರೈತನಿಗೆ ವಾಸಕ್ಕೆ ಅನುಕೂಲವಾದ ಮನೆಗಳು ಇರುವುದಿಲ್ಲ. ಅನುಕೂಲವಾದ ಮನೆಗಳನ್ನು ಕಟ್ಟಿಸಿಕೊಡಬೇಕು. ಅವನು ಹುಳುಗಳನ್ನು ಸಾಕುವುದಕ್ಕೆ ಜಾಕಿಕೇಂಪ್ರಗಳಿರುವುದಿಲ್ಲ ಉಪಕರಣಗಳನ್ನು ಇಟ್ಟುಕೊಳ್ಳುವುದಕ್ಕೆ ಸಾಕಷ್ಟು ವಿಶಾಲವಾದ ಮನೆಗಳು ಇರುವುದಿಲ್ಲ. ರೈತರು ಚಿಕ್ಕ ಚಿಕ್ಕ ಮನೆಗಳಲ್ಲಿ ಹುಳುಗಳನ್ನು ಸಾಕುವುದರಿಂದ ಅನೇಕ ಸಂದರ್ಭಗಳಲ್ಲಿ ನಷ್ಟಕ್ಕೆ ಒಳಗಾಗುತ್ತಾನೆ. ನಮ್ಮಲ್ಲಿ ಅನುಬವಿ ಮುದುಕರು ಹೇಳುತ್ತಾರೆ, ಒಂದೇಕಡೆ ರೇಷ್ಮೆ ಹುಳುಗಳನ್ನು ಸಾಕುತ್ತಿದ್ದರೆ ಹುಳುಗಳು ಸರಿಯಾಗಿ ಬರುವುದಿಲ್ಲ. ಮತ್ತೆ ಹಿಪ್ಪನೇರಳೆ ಗಿಡಗಳ ಬುಡಕ್ಕೆ ಒಂದು ರೀತಿಯ ಕಪ್ಪು ಚುಕ್ಕೆ ರೋಗ ತಗುಲಿ ಬೆಳೆ ಕೆಡುತ್ತಾ ಇರುತ್ತದೆ. ಆದ್ದರಿಂದ ಇದನ್ನು ಆಗಿಂದಾಗ್ಗೆ ಬದಲಿಸುತ್ತಿರಬೇಕೆಂದು ಹೇಳುತ್ತಿರುತ್ತಾರೆ. ಆದ್ದರಿಂದ ಕ್ರಿಮಿನಾಶಕ ರಾಸಾಯನಿಕ ದ್ರವ್ಯಗಳನ್ನು ಒದಗಿಸಿ ಇದನ್ನು ನಿವಾರಣೆ ಮಾಡಲು ಸರ್ಕಾರದವರ ರೈತರಿಗೆ ಅನುಕೂಲವನ್ನು ಮಾಡಿಕೊಡಬೆ ಕೆಂದು ಹೇಳುತ್ತೇನೆ. ಏತಕ್ಕೆಂದರೆ ಬಿತ್ತನೆ ಬೀಜವನ್ನು ಸರ್ಕಾರ ದವರ ವತಿಯಿಂದ ಏನು ಸಪ್ಲೈ ಮಾಡುತ್ತಾರೆ ಆದಕ್ಕೆ ಒಂದು ಕಡೆ ರೋಗ ಬಂದರೆ ಇಡಿ ಕರ್ನಾಟಕ ದಲ್ಲಿಯೇ ಅವರಿಸಿಕೊಳ್ಳತಕ್ಕಂಥ ಪ್ರಸಂಗಬರುತ್ತದೆ. ರೇಷ್ಮೆ ಹುಳುಗಳಿಗೆ ಒಂದುರೀತಿಯಾದ ಗಂಟು ರೋಗ ಮತ್ತು ಸಪ್ಪೆರೋಗವೆಂದು ಬರುತ್ತದೆ. ಈ ಎರಡು ರೋಗಗಳು ಬಂದರೆ ರೈತರು ವಿಶೇಷವಾದ ನಷ್ಟವನ್ನು ಅನುಭವಿಸಬೇಕಾಗುತ್ತದೆ ಆದ್ದರಿಂದ ಈ ರೋಗಗಳನ್ನು ಹರಡದಂತೆ ಸರ್ಕಾರದವರು ನೋಡಿ ಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ರೈತನು ಒಂದು ಬೆಳೆಯನ್ನು ಬೆಳೆದು ಮಾರಿದ ತಕ್ಷಣವೇ ಆತನ ಮನೆಗೆ ಹೋಗಿ ಉಪಯೋಗಿಸಿದಂಥ ಸಲಕರಣೆಗಳನ್ನು ಶುದ್ಧ ಮಾಡುವತ್ತ ಅಧಿಕಾರಿಗಳು ತಮ್ಮ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಅಧಿಕಾರಿಗಳು ಈಗ ಏನು ಮಾಡುತ್ತಿರುತ್ತಾರೆಂದರೆ ಅವರಿಗೆ ಪಹಿಸಿಕೊಟ್ಟಿರತಕ್ಕಂಥ ೨೮-೩೦ ಡಿವಿಜನ್‌ಗಳಲ್ಲಿ ಏಲ್ಲೋ ಒಂದುಕಡೆ ಹೋಗಿ ಕೆಲಸಮಾಡಿ ಕಾಲವನ್ನು ಕಳೆದುಬಿಡುತ್ತಿರುತ್ತಾರೆ. ಆದ್ದರಿಂದ ಪ್ರತಿಯೊಬ್ಬ ರೈತನ ಮನೆಗೂ ಹೋಗಿ ಬೆಳೆಯನ್ನು ನೋಡುವಂಥ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ.

ಬಳಿದೇವಾಲಯ ಕೇಂದ್ರ ಸರ್ಕಾರವು ರೀಸರ್ಚ್ ಸ್ಟೇಷನ್ ಎಂದು ಏನು ಇತ್ತು ಅದು ಈಗ ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಮಾನ್ಯ ಸಚಿವರು ಆ ಪ್ರದೇಶದಲ್ಲಿ ಪ್ರವಾಸವನ್ನು ಕೈಗೊಂಡು ಅನುಕೂಲವನ್ನು ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರೈತರು ಹುಳುಗಳನ್ನು ಸಾಕುವುದಕ್ಕೆ ಮನೆಗಳು ಇರುವುದಿಲ್ಲ ತಾವು ಮನೆಗಳನ್ನು ರೈತರಿಗೆ ಕಟ್ಟಿಸಿಕೊಡುವುದರ ಕಡೆಗೆ ವಿಶೇಷವಾದ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಏತಕೆಂದರೆ ರೈತರು ಒಂದುಕಡೆ ದನಗಳನ್ನು ಕಟ್ಟಿಕೊಳ್ಳಬೇಕು. ಒಂದುಕಡೆ ಕುರಿಗಳನ್ನು ಕಟ್ಟಿಕೊಳ್ಳಬೇಕು. ಮತ್ತೊಂದುಕಡೆ ಆಡುಗೆಯನ್ನು ಮಾಡಿಕೊಳ್ಳಬೇಕು. ಈ ಮುದ್ದೆ ಹುಳುಗಳನ್ನು ಸಾಕಬೇಕೆಂದರೆ ಹುಳುಗಳಿಗೆ ಒಂದು ಒಳ್ಳೆಯ ವಾತಾವರಣ ವಿಲ್ಲದೆ ರೋಗಗಳಿಗೆ ತುತ್ತಾಗತಕ್ಕಂಥ ಸಂದರ್ಭಗಳು ಇರುತ್ತವೆ. ಆದ್ದರಿಂದ ರೈತರು ಯಾರು ರೇಷ್ಮೆ ಜಾಕಿ ಕೇಂದ್ರಗಳನ್ನು ಇಟ್ಟುಕೊಂಡು ಬೆಳೆಯನ್ನು ಬೆಳೆಯುತ್ತಾರೆ ಅವರಿಗೆ ಸಬ್‌ಸಿಡಿಯನ್ನು ಕೊಟ್ಟು ಅನುಕೂಲವನ್ನು ಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ತಾಲೂಕಿನಲ್ಲಿ ಕೆಂಪನಹಳ್ಳಿ ಎಂಬ ಗ್ರಾಮವು ಇರುತ್ತದೆ ಆ ಗ್ರಾಮದಲ್ಲಿ ಗೂಡನ್ನು ತೆಗೆದುಕೊಂಡು ರೀಲಿಂಗ್ ಬಿಡುತ್ತಾರೆ. ಈ ರೀಲಿಂಗ್ ಮಾಡತಕ್ಕಂಥ ಸ್ಥಳಗಳಲ್ಲಿ ೧೦ ರಿಂದ ೩೦ ಜನಗಳವರೆಗೂ ಸಣ್ಣ ಸಣ್ಣ ಮಕ್ಕಳೂ ಸೇರಿ ನೂಲನ್ನು ತೆಗೆಯುತ್ತಾರೆ. ಈ ಕೇಂದ್ರಕ್ಕೆ ಒಂದು ಇಂಡಸ್ಟ್ರಿಯಲ್ ಎಸ್ಟೇಟ್‌ಮಾಡಿ ಗೂಡನ್ನು ಕೊಂಡುಕೊಳ್ಳುವಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಸಲಹೆ ಕೊಡುತ್ತೇನೆ

ನಮ್ಮಲ್ಲಿ ಕೆಲವುಕಡೆ ರೇಷ್ಮೆ ಬೆಳೆಯನ್ನು ಏನು ಬೆಳೆಯುತ್ತಾರೆ, ಅದಕ್ಕೆ ಕೆಲವು ಸಂದರ್ಭಗಳಲ್ಲಿ ಸರಿಯಾದ ಬೆಲೆ ಇರುವುದಿಲ್ಲ. ಕೆ.ಜಿ. ಗೂಡಿಗೆ ೩೦–೪೦ ರೂಪಾಯಿಗಳೀದ ಕೆ.ಜಿ.ಗೆ ೮೦–೧೦೦ರೂಪಾಯಿಗೆ ಇಳಿಯುವ ಸಂದರ್ಭಗಳು ಇರುತ್ತವೆ. ಒಂದು ನಿಗದಿಯಾದ ಬೆಲೆ ಇಲ್ಲದಿರುವಕಾರಣ ರೈತನು ಅನೇಕ ಕಷ್ಟನಷ್ಟಗಳಿಗೆ ಒಳಗಾಗುತ್ತಾನೆ. ಆದ್ದರಿಂದ ಒಂದು ನಿಗದಿಯಾದ ಬೆಲೆಯನ್ನು ಮಾಡುವುದರಿಂದ ತೆಗೆ ರೈತನಿಗೆ ವರ್ಷದಲ್ಲಿ ಬೋನಸ್ ಕೊಡುವ ಪದ್ಧತಿಯನ್ನು ಜಾರಿಗೆ ತಂದರೆ ಅದರಿಂದ ರೈತರಿಗೆ ಅನುಕೂಲವಾಗುವುದಲ್ಲದೆ, ತೊಂದರೆಯನ್ನು ತಪ್ಪಿಸಿದಂತಾಗುತ್ತದೆಂದು ಹೇಳುತ್ತೇನೆ.

ನಮ್ಮಲ್ಲಿ ಸುಮಾರು ಆರುಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ರೇಷ್ಮೆ ಬೆಳೆಯನು ಬೆಳೆಯುತ್ತಿರುತ್ತಾರೆ. ಮಾನ್ಯ ಮಂತ್ರಿಗಳು ಈ ಪ್ರದೇಶಗಳಲ್ಲಿ ಪ್ರವಾಸವನ್ನು ಮಾಡಿ ಈ ಭಾಗದ ಜನರಿಗೆ ಇನ್ನೂ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಿಕೊಟ್ಟು ಈ ಒಂದು ಕೈಗಾರಿಕೆ ಬೆಳೆಯಲು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡತಕ್ಕಂಥ ವಿಚಾರದ ಬಗ್ಗೆ ಹೇಳುವುದಾದರೆ ಈ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಡಿಸ್ಟ್ರಿಕ್ಟ್ ಮ್ಯಾನೇಜರ್‌ಗಳ ಮುಖಾಂತರ ಸಾಲವನ್ನು ಕೊಡುತ್ತಿರುವುದು ಸರಿಯಷ್ಟೇ. ಆದರೆ ಈ ರೀತಿ ಸಾಲವನ್ನು ಕೊಟ್ಟ ಮೇಲೆ ಸಾಲನ್ನು ತೆಗೆದುಕೊಂಡಂಥವರಿ ಯಾವರೀತಿ ಅನುಕೂಲತೆಗಳನ್ನು ಒದಗಿಸಿಕೊಡಬೇಕೋ ಆರೀತಿಯಲ್ಲಿ ಅನುಕೂಲತೆಗಳನ್ನು ಒದಗಿಸಿ ಕೊಡುತ್ತಿಲ್ಲ. ಅವನು ಸಾಲವನ್ನು ತೆಗೆದುಕೊಂಡು ಯಾವುದಾದರೂ ಒಂದು ಕೈಗಾರಿಕೆಯನ್ನು ಪ್ರಾರಂಭ ಮಾಡಿದರೆ ಅದಕ್ಕೆ ಬೇಕಾದ ಎಲೆಕ್ಟ್ರಿಸಿಟಿಯನ್ನೇ ಒದಗಿಸುವುದಿಲ್ಲ ನಾಲ್ಕು ಐದು ವರ್ಷಗಳಾದರೂ ಈರೀತಿ ಎಲೆಕ್ಟ್ರಿಕ್ ಸಿಟಿಯನ್ನು ಒದಗಿಸದಿದ್ದರೆ ಸರ್ಕಾರದವರು ಸಾಲವನ್ನು ಕೊಟ್ಟು ಯಾವ ಪ್ರಯೋ ಜನವೂ ಆಗುವುದಿಲ್ಲ. ಆದನು ಸಾಲವನ್ನು ತೆಗೆದುಕೊಂಡಂದಿನಿಂದ ಬಡ್ಡಿಯನ್ನು ಮಾತ್ರ ವಸೂಲು ಮಾಡುತ್ತಿರುತ್ತಾರೆ. ಆದ್ದರಿಂದ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್‌ನವರು ಇಂಥ ಸಂದರ್ಭಗಳಲ್ಲಿ ಕೂಡಲೆ ಎಲೆಕ್ಟ್ರಿಸಿಟಿಯನ್ನು ಪೂರೈಕೆ ಮಾಡುತ್ತ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ಬೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಪೊಳೆಹೊನ್ನೂರು). - ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕೈಗಾರಿಕಾ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಯನ್ನು ಸ್ವಾಗತಿಸುತ್ತಾ ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಇಚ್ಛಿಸಿದ್ದುತ್ತೇನೆ. ಭಾರತದೇಶ ಪ್ರಪಂಚದಲ್ಲಿಯೇ ದೊಡ್ಡದಾದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಒಂದಾಗಿದೆ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಬೆಳೆಯುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟುವುದಕ್ಕೆ, ಮತ್ತು ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಸತತವಾಗಿ ಪ್ರಯತ್ನ ವನ್ನು ಮಾಡುತ್ತಾ ಬಂದಿರುತ್ತವೆ. ಆದಾಗ್ಯೂ ಸಮಸ್ಯೆ ಸಮಸ್ಯೆಯಾಗಿಯೇ ಉಳಿದಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬೇಕಾದಷ್ಟು ಪ್ರಕೃತಿ ಸಂಪತ್ತು ಮತ್ತು ಖನಿಜ ಸಂಪತ್ತು, ಜೊತೆಗೆ ಪರಿಣತರು

ಇದ್ದಾರೆ. ಅದನ್ನು ಆರಿತುಕೊಂಡು ಕರ್ನಾಟಕ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ವಹಿಸಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಪ್ರಸ್ತುತ ಸರ್ಕಾರದ ಮುಖ್ಯ ಗುರಿ ಗೃಹ ಕೈಗಾರಿಕೆಗಳನ್ನು, ಮತ್ತು ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಮತ್ತು ಬೆಳೆಸುವುದು. ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನನಗೆ ಕಾಲಾವಕಾಶವು ಕಡಿಮೆ ಇರುವುದರಿಂದ ಹೆಚ್ಚಿಗೆ ವಿಶ್ಲೇಷಣೆ ಮಾಡುವುದಕ್ಕೆ ಹೋಗದೆ, ನಮ್ಮ ರಾಜ್ಯದ ಆಧಾರಸ್ಥಂಭಗಳಾದಂಥ ವಿಶ್ವೇಶ್ವರಯ್ಯ ಐರನ್ ಆಂಡ್ ಸ್ಟೀಲ್ ಫ್ಯಾಕ್ಟರಿ ಮತ್ತು ಮೈಸೂರು ಪೇಪರ್ ಮಿಲ್ಸ್‌ಗಳ ಬಗ್ಗೆ ಕೆಲವೊಂದು ವಿಷಯ ಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅಪೇಕ್ಷಿಸುತ್ತೇನೆ.

ನಮ್ಮ ದೇಶದ ಪಬ್ಲಿಕ್ ಸೆಕ್ಟಾರ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ (Alloy Steel) ಅಲಾಯ್ ಸ್ಟೀಲನ್ನು ಉತ್ಪಾದನೆ ಮಾಡತಕ್ಕಂಥ ಮಹತ್ತರವಾದಂಥ ಫ್ಯಾಕ್ಟರಿ ಎಂದರೆ ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಫ್ಯಾಕ್ಟರಿಯಾಗಿರುತ್ತದೆ ಇದರಲ್ಲಿ ಕರ್ನಾಟಕ ಸರ್ಕಾರ ೬೦ ಪರ್ಸೆಂಟ್ ಷೇರು ಬಂಡವಾಳವನ್ನು ಹೂಡಿದ್ದಾರೆ. ಕೇಂದ್ರ ಸರ್ಕಾರ ೪೦ ಪರ್ಸೆಂಟ್ ಷೇರು ಬಂಡವಾಳವನ್ನು ಹೂಡಿದ್ದಾರೆ. The authorised share capital is Rs. 50 crores and paid up share capital as on 31-3-1979 is 39.57 crores ಆಗಿರುತ್ತದೆ. ಮಾನ್ಯ ಅಧ್ಯಕ್ಷರೆ ಈ ಒಂದು ಫ್ಯಾಕ್ಟರಿಯಲ್ಲಿ ೧೯೭೮-೭೯ರಲ್ಲಿ ಉಂಟಾದ ನಷ್ಟವೆಂದರೆ ೯.೨೬ ಕೋಟಿ ರೂಪಾಯಿಗಳು. ಇಷ್ಟೊಂದು ಹೆಚ್ಚಿನ ಮಟ್ಟದಲ್ಲಿ ಈ ವಿಶ್ವೇಶ್ವರಯ್ಯ ಫ್ಯಾಕ್ಟರಿಯಲ್ಲಿ ನಷ್ಟವಾಗಲು ಕಾರಣವೇನೆಂದರೆ, ವಿದ್ಯುಚ್ಛಕ್ತಿಯ ಕೊರತೆಯೇ ಮುಖ್ಯ ಕಾರಣವಾಗಿರುತ್ತದೆ. ೧೯೭೫-೭೬ರಲ್ಲಿ ೨೫.೨ ಪರ್ಸೆಂಟ್ ಪವರ್ ಕಟ್ ಮಾಡಲಾಯಿತು. ೧೯೭೬-೭೭ರಲ್ಲಿ ೩೬.೯ ಪರ್ಸೆಂಟ್ ಪವರ್ ಕಟ್ ಮಾಡಲಾಯಿತು. ೧೯೭೭-೭೮ರಲ್ಲಿ ೨೫ ಪರ್ಸೆಂಟ್ ಪವರ್ ಕಡಿತವಾಗುದರಿಂದ ಈ ಒಂದು ದೊಡ್ಡ ನಷ್ಟವನ್ನು ಅನು ಭವಿಸಬೇಕಾಯಿತು. ಈ ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಫ್ಯಾಕ್ಟರಿಯು ಸಂಪೂರ್ಣವಾಗಿ ವಿದ್ಯುತ್ ಆಧಾರಿತ ಇಂಡಸ್ಟ್ರಿಯಾಗಿರುತ್ತದೆ. ಮೊದಲು ೧೯೭೫ರಲ್ಲಿ ಚಾರ್‌ಕೋಲ್‌ನಿಂದ ನಡೆಯುತ್ತಿದ್ದುದನ್ನು ತೆಗೆದುಹಾಕಿ ಈಗ ಸಂಪೂರ್ಣವಾಗಿ ವಿದ್ಯುತ್ ಆಧಾರಿತ ಕೈಗಾರಿಕೆ ಯನ್ನಾಗಿ ಮಾಡಲಾಗಿರುತ್ತದೆ.

ಈ ಸಂದರ್ಭದಲ್ಲಿ ಈ ಒಂದು ಮಹತ್ತರವಾದ ಕಾರ್ಖಾನೆಯ ಬಗ್ಗೆ ಗಮನ ಹರಿಸಿ ಅದು ಅನು ಭವಿಸುತ್ತಿರುವ ವಿದ್ಯುಚ್ಛಕ್ತಿ ಕೊರತೆಯನ್ನು ನಿವಾರಿಸಲು ಸೂಕ್ತವಾದ ವ್ಯವಸ್ಥೆಯನ್ನು ಮಾಡದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಈಗ ಈ ಒಂದು ಕಾರ್ಖಾನೆಯಲ್ಲಿ ಕಬ್ಬಿಣದ ಅದಿರನ್ನು ಸ್ಮೆಲ್ಟ್ ಮಾಡುವುದರಿಂದ ಹಿಡಿದು ಕಬ್ಬಿಣವನ್ನು ತಯಾರು ಮಾಡುವವರೆಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸ ಲಾಗುತ್ತದೆ. ಇಲ್ಲಿ ೧೯೭೫-೭೬ರಲ್ಲಿ ಶೇಕಡ ೨೫.೨ರಷ್ಟು ವಿದ್ಯುಚ್ಛಕ್ತಿ ಕಡಿತದಿಂದ ೧೧.೬ ಕೋಟಿ ರೂಪಾಯಿ ನಷ್ಟವಾಗಿದೆ. ೧೯೭೬-೭೭ರಲ್ಲಿ ಶೇಕಡ ೩೬.೯ರಷ್ಟು ಕಡಿತದಿಂದ ೧೬.೨೩ ಕೋಟಿ ರೂಪಾಯಿ ನಷ್ಟವಾಗಿದೆ. ೧೯೭೭-೭೮ರಲ್ಲಿ ಶೇಕಡ ೨೫ರಷ್ಟು ವಿದ್ಯುಚ್ಛಕ್ತಿ ಕಡಿತದಿಂದ ೨೧.೫೭ ಕೋಟಿ ರೂಪಾಯಿ ನಷ್ಟವಾಗಿದೆ. ಇದು ಉತ್ಪಾದನಾ ನಷ್ಟ. ಈ ರೀತಿ ಈ ಕಾರ್ಖಾನೆ ಕೇವಲ ವಿದ್ಯುಚ್ಛಕ್ತಿ ಕಡಿತದಿಂದ ಇಷ್ಟೊಂದು ನಷ್ಟವನ್ನನುಭವಿಸಿ ಕ್ರಮೇಣ ಕಂಪನಿ ಮುಚ್ಚುವಂಥ ಪರಿಸ್ಥಿತಿಗೆ ಬರುತ್ತೆ. ಆದ್ದರಿಂದ ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಸೆಲ್ಫ್ ಥರ್ಮಲ್ ಪವರ್ ಪ್ಲಾಂಟನ್ನು ಏತಕ್ಕೆ ಸ್ಥಾಪನೆ ಮಾಡಬಾರದು ? ಈಗಾಗಲೇ ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಯೋಜನೆಯನ್ನು ವಿ.ಐ.ಎಸ್.ಎಲ್. ನವರು ತಯಾರು ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಅಲ್ಲಿ ೬೦ ಮೆಗಾವ್ಯಾಟ್‌ನ ಥರ್ಮಲ್ ಪ್ಲಾಂಟ್ ಮಾಡುವುದಕ್ಕೆ ಮೂವತ್ತು ಕೋಟಿ ರೂಪಾಯಿ ಆಗಬಹುದೆಂದು ಅಂದಾಜು ಮಾಡಿದ್ದಾರೆ. ಆದ್ದರಿಂದ ಸರ್ಕಾರ ಅಲ್ಲಿ ಆದಷ್ಟು ಬೇಗ ಥರ್ಮಲ್ ಪ್ಲಾಂಟನ್ನು ಎಸ್ಟಾಬ್ಲಿಷ್ ಮಾಡದಿದ್ದರೆ ಖಂಡಿತವಾಗಿ ಅಲ್ಲಿ ಬಹಳ ನಷ್ಟವಾಗಿ ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಿಂದ ಬೆಳೆದುಬಂದ ನಮ್ಮ ದೇಶದ ಆಸ್ತಿಯಾಗಿರತಕ್ಕ, ಮುಖ್ಯ ಸಂಪತ್ತಾಗಿ ರತಕ್ಕ ಕಾರ್ಖಾನೆಯನ್ನು ಕಳೆದುಕೊಳ್ಳಬೇಕಾದಂಥ ಪರಿಸ್ಥಿತಿ ಬರುತ್ತದೆ. With regard to the plant performance and other activities, it has made a wonderful progress ಆದರ ಬಗ್ಗೆ ನಾನು ವಿವರವನ್ನು ಹೇಳುವುದಕ್ಕೆ ಕಾಲಾವಕಾಶವಿಲ್ಲ.

ಈಗ ಭದ್ರಾವತಿಯ ''ಮೈಸೂರ್ ಪೇಪರ್ ಮಿಲ್ಸ್'' ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದೂ ಕೂಡ ಒಂದು ಮಹತ್ತರವಾದ ಕಾರ್ಖಾನೆಯಾಗಿದೆ. ಈಗ

ನಮ್ಮ ದೇಶದಲ್ಲಿ ನ್ಯೂಸ್‌ಪ್ರಿಂಟ್ ಕೊರತೆಯಿಂದಾಗಿ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದೇವೆ. ನಮ್ಮ ದೇಶದಲ್ಲಿ 75% of the newsprint is be ng imported. ಅದಕ್ಕೋಸ್ಕರ ಸುಮಾರು ೫೦-೬೦ ಕೋಟಿ ರೂಪಾಯಿ ಹಣವನ್ನು ವಿದೇಶೀ ವಿನಿಮಯಕ್ಕೆ ಕೊಡುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಮೈಸೂರ್ ಪೇಪರ್ ಮಿಲ್ ಒಂದು ಮಾಸ್ಟರ್ ಪ್ಲಾನ್ ಮಾಡಿ ೧೦೦ ಕೋಟಿ ರೂಪಾಯಿನ ಯೋಜನೆ ಹಾಕಿಕೊಂಡಿದೆ. ಈಗ ಪ್ರಸ್ತುತ ಉತ್ಪಾದನೆ ೨೬ ಸಾವಿರ ಟನ್ ಮಾತ್ರ. ಆದರೆ ಈ ಯೋಜನೆಯನ್ನು ಕಾರ್ಯಗತ ಮಾಡಿ ಮುಗಿಸಿದರೆ ೧ ಲಕ್ಷ ೧೨ ಸಾವಿರ ಟನ್ ಉತ್ಪಾದನೆ ಯಾಗಬಹುದೆಂದು ಅಂದಾಜನ್ನಿಟ್ಟುಕೊಂಡಿದ್ದಾರೆ. ಅಂದರೆ ಒಂದಕ್ಕೆ ನಾಲ್ಕರಷ್ಟು ಉತ್ಪಾದನೆ ಮಾಡತಕ್ಕ ಕಾರ್ಯಕ್ರಮ ಇದೆ. ಇದರ ಇನ್ನೊಂದು ವೈಶಿಷ್ಟ್ಯವೆಂದರೆ ಈ ಕಾರ್ಯವನ್ನು ಕೇವಲ ೩೮ ತಿಂಗಳಲ್ಲೇ ಮುಗಿಸತಕ್ಕ ವ್ಯವಸ್ಥೆ ಇದೆ. ಕೇವಲ ೩೮ ತಿಂಗಳಲ್ಲೇ ಈ ಒಂದು ಬೃಹದಾಕಾರವಾದ ಕಾರ್ಯವನ್ನು ಮುಗಿಸತಕ್ಕ ಯೋಜನೆಯನ್ನು ರೂಪಿಸಲಾಗಿದೆ. ಪ್ರಸ್ತುತ ನಮ್ಮ ರಾಷ್ಟ್ರದ ನ್ಯೂಸ್‌ಪ್ರಿಂಟ್ ಬೇಡಿಕೆ ೩,೫೦,೦೦೦ ಟನ್ ಇದೆ. ಈ ಬೇಡಿಕೆಯ ಪ್ರಮಾಣ ೧೯೭೮ರ ಹೊತ್ತಿಗೆ ೯ ಲಕ್ಷ ಟನ್ ಆಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ. ಈಗ ನ್ಯೂಸ್‌ಪ್ರಿಂಟ್ ದೊರಕತಕ್ಕ ಒಂದೇ ಒಂದು ಸ್ಥಳ ಎಂದರೆ ನೇಪಾ ಮಿಲ್ಸ್. ಅಲ್ಲಿ ೫೫ ಸಾವಿರ ಟನ್ ನ್ಯೂಸ್‌ಪ್ರಿಂಟ್ ಉತ್ಪಾದನೆ ಇದೆ. ಕೇರಳದಲ್ಲಿ ನ್ಯೂಸ್‌ಪ್ರಿಂಟ್ ಉತ್ಪಾದನೆ ಮಾಡತಕ್ಕ ಸ್ಕೀಂ ಕಾರ್ಯಗತವಾಗಿದೆ. ಆದರೆ ಇನ್ನೂ ಅಲ್ಲಿ ಉತ್ಪಾದನೆ ಪ್ರಾರಂಭವಾಗಿಲ್ಲ. ೧೯೭೯ರ ಅಂತ್ಯದಲ್ಲಿ ಕಾರ್ಯರೂಪಕ್ಕೆ ಬರಲಿದೆ ಎಂದು ತಿಳಿದು ಬಂದಿದೆ. The Mysore Paper Mill venture will thus go a longway in augmenting the indigeneous supply of newsprint ಈಗಾಗಲೇ ನಾನು ಪೇಳಿದಹಾಗೆ ಶೇಕಡ ೭೫ರಷ್ಟು ನ್ಯೂಸ್‌ಪ್ರಿಂಟನ್ನು ನಾವು ವಿದೇಶದಿಂದ ಆಮದು ಮಾಡಿಕೊಂಡು ಸುಮಾರು ೫೦ ರಿಂದ ೬೦ ಕೋಟಿ ರೂಪಾಯಿವರೆಗೆ ಹಣವನ್ನು ವಿದೇಶ ವಿನಿಮಯ ಮಾಡುತ್ತಿದ್ದೇವೆ ಈ ಕೊರತೆಯನ್ನು ತುಂಬಲು ಮೈಸೂರು ಪೇಪರ್ ಮಿಲ್ಸ್ ಮುಂದೆ ಬಂದಿದೆ ಆದ್ದರಿಂದ ಅದಕ್ಕೆ ಸರ್ಕಾರ ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳು ಈ ಕಾರ್ಖಾನೆಯ ಎಕ್ಸ್‌ಪ್ಯಾನ್‌ಷನ್ ಕಾರ್ಯಕ್ರಮಕ್ಕೆ ಪೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಾ ಬಂದಿದ್ದಾರೆ. ಈಗಾಗಲೇ ೫ ಕೋಟಿ ರೂಪಾಯಿ ಹಣವನ್ನು ಅದಕ್ಕೆ ಕೊಟ್ಟಿದ್ದಾರೆ. ೭೫ ಸಾವಿರ ಎಕರೆ ಅರಣ್ಯ ಭೂಮಿಯನ್ನು ವೈಜ್ಞಾನಿಕವಾಗಿ ರಾ ಮೆಟೀರಿಯಲ್ಸ್‌ಗೆ ಬೇಕಾದ ಗಿಡಮರಗಳನ್ನು ಬೆಳೆಸುವುದಕ್ಕೆ ಕೇಳಿದ್ದಾರೆ. ಆದರಲ್ಲಿ ೫೫ ಸಾವಿರ ಎಕರೆಯನ್ನು ಸರ್ಕಾರ ದವರು ಈಗಾಗಲೇ ರಿಲೀಸ್ ಮಾಡಿದ್ದಾರೆ. ಇನ್ನುಳಿದ ಅರಣ್ಯ ಜಮೀನನ್ನು ಆದಷ್ಟು ಬೇಗ ರಿಲೀಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರವರಾದ ಜಾಫರ್ ಸಯೀಫುಲ್ಲಾ ಅವರು ನಮ್ಮ ಜಿಲ್ಲೆಯ ಶಾಸಕರನ್ನೆಲ್ಲಾ ಕರೆದುಕೊಂಡು ಹೋಗಿ ಆ ಕಾರ್ಖಾನೆಯ ವಿವರಗಳನ್ನೆಲ್ಲಾ ತೋರಿಸಿದರು. ಅದನ್ನು ನೋಡಿ ನಮಗೆ ಬಹಳ ಆನಂದವಾಯಿತು. ಕಾರ್ಖಾನೆಯ ಎಕ್ಸ್‌ಪ್ಯಾನ್‌ಷನ್ ಕಾರ್ಯಕ್ರಮವನ್ನು ಮುಗಿಸಿದಮೇಲೆ ಎಷ್ಟು ಅನುಕೂಲವಾಗುತ್ತದೆ ಎಂಬುದರ ಬಗ್ಗೆ ವಿಶದವಾಗಿ ವಿವರ ಕೇಳಿದಮೇಲೆ ನಮಗೆ ತುಂಬಾ ಸಂತೋಷವಾಯಿತು. ಅಲ್ಲಿ erection of machinery, ಮತ್ತು civil works ಕೆಲಸ ಭರದಿಂದ ಸಾಗಿದೆ. 90% of the contract work has been finalised. ಇನ್ನೊಂದು ಮುಖ್ಯವಾದ ವಿಷಯವೆಂದರೆ ಆ ಕಾರ್ಖಾನೆಯನ್ನು ಎಕ್ಸ್‌ಪ್ಯಾನ್‌ಷನ್ ಮಾಡುವುದರಿಂದ ೧೦ ಸಾವಿರ ಜನರಿಗೆ ಉದ್ಯೋಗ ದೊರಕುತ್ತದೆ. ಇದು ಹೆಮ್ಮೆ ಪಡತಕ್ಕ ವಿಷಯ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾಮಾನ್ಯವಾಗಿ ಪೇಪರ್ ತಯಾರು ಮಾಡುವುದಕ್ಕೆ ಉಪಯೋಗಿಸುತ್ತಿರುವ ರಾ ಮೆಟೀರಿಯಲ್ಸ್ ಏನೆಂದರೆ ಬೊಂಬು, ಯೂಕ್ಲಿಪ್ಟಸ್ ಮತ್ತು ಹಾರ್ಡ್‌ವುಡ್. ಆದರೆ ಈಗ ಹೊಸದಾಗಿ ಉಪಯೋಗಿಸತಕ್ಕ ಕಚ್ಚಾವಸ್ತು ಯಾವುದೆಂದರೆ ಕಬ್ಬಿನ ಸಿಪ್ಪೆ. ನಿನ್ನೆತಾನೇ ಮಾನ್ಯ ಸದಸ್ಯರಾದ ಚಂದ್ರಶೇಖರ್ ಅವರು ಕಬ್ಬಿನ ಸಿಪ್ಪೆಯನ್ನು ಕಚ್ಚಾವಸ್ತುವನ್ನಾಗಿ ಉಪಯೋಗಿಸುವುದಕ್ಕೆ ಹೊರಟಿದ್ದಾರೆ, ಇದು ಎಷ್ಟರಮಟ್ಟಿಗೆ ಫಲಕಾರಿಯಾಗುತ್ತದೆಯೋ ಮತ್ತು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಮಾಡತಕ್ಕ ಕಾರ್ಯಕ್ರಮ ಯಶಸ್ವಿಯಾಗುತ್ತದೆಯೋ ಎಂಬ ಅನುಮಾನವನ್ನು ವ್ಯಕ್ತಮಾಡಿದರು. ಅದರ ಬಗ್ಗೆ ನಾನು ಹೇಳುವುದೇನೆಂದರೆ, bagase has been fully established, as the best raw material for the production of paper. ಇದರ ಬಗ್ಗೆ ತಜ್ಞರಿಂದ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿ,

